# ಅಪರಂಜಿ

ತಿಳಿನಗೆಯ ಕಾರಂಜಿ

ಜೂನ್ - 2015

ಈಗ ಮೂರು ತರಹ ಇಂಡಿಯಾ ಇದೆ.... ಬಿಪಿಎಲ್ ಇಂಡಿಯ,
ಎಪಿಎಲ್ ಇಂಡಿಯ ಮತ್ತು ಐಪಿಎಲ್ ಇಂಡಿಯ!



**ಸಂಪಾದಕ ಮಂಡಳಿ**

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಎಂ. ಶಿವಕುಮಾರ್

**ಟ್ರಸ್ಟಿಗಳು**

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ವಿ.ಆರ್. ನಾಥ್

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್

**ಗೌರವ ಸಲಹೆಗಾರರು**

ಶ್ರೀ ಆರ್. ಶೇಷಗಿರಿರಾವ್

**ಚಂದಾ ವಿವರ:**
**ಬಿಡಿ ಪ್ರತಿ: ರೂ. 10/-**
**ವಾರ್ಷಿಕ ಚಂದಾ: ರೂ. 100/-**
**ಹತ್ತು ವರ್ಷದ ಚಂದಾ: ರೂ. 750/-**

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳಿಸಿ.
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.



# ಅಪರಂಜಿ

ತಿಳಿನಗೆಯ ಕಾರಂಜಿ

**ಸಂಪುಟ 32**
**ಸಂಚಿಕೆ - 9**
**ಜೂನ್ - 2015**

## *ಈ ಸಂಚಿಕೆಯಲ್ಲಿ.....*


| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ದ್ವಾರಪಾಲಕರು | **ವಾಣೀ ಸುರೇಶ್** | 4 |
| ಅಪರೂಪದ ಅನುಭವಗಳು | **ಎಚ್. ಗೋಪಾಲಕೃಷ್ಣ** | 11 |
| ತುಂತುರು | **ದಂನಾಆ** | 16 |
| ನಾನೇಕೆ ಎಮ್ಮೆ ಕಟ್ಟಲಿಲ್ಲ? | **ನೀರಗುಂದ ಕೇಶವಮೂರ್ತಿರಾವ್** | 17 |
| ಕೆಂಪು ಕೋಟು | **ನುಗ್ಗೆಹಳ್ಳಿ ಪಂಕಜ** | 22 |
| ಕೊರವಂಜಿ ಪದಬಂಧ | **ವಿದ್ಯಾ ವಿ. ಹಾಲಭಾವಿ** | 23 |
| ವಜ್ರದ ಮೂಲ | **ಡಾ. ಶ್ಯಾಮಲಾ ರವಿಶಂಕರ್** | 24 |
| ಹೊಸ ಕಾಲದ ಪ್ರೀತಿಯ.. | **ಬಿ.ಕೆ. ಗಣೇಶ್** | 27 |
| ಆ ಮೀ ಆ | **ಆನಂದ** | 29 |
| ಬೇಡುವವನ ಗುಣ | **ಬೇಲೂರು ರಾಮಮೂರ್ತಿ** | 32 |
| ತಾತ-ಮೊಮ್ಮಗ ಸಂವಾದ | **ಸಿ.ಆರ್. ಸತ್ಯ** | 34 |
| ಆ...ಕ್ಷಿ...ಕ್ಷಮಿಸಿ ನಾನು... | **ಶ್ರೀಕಾಂತ ಗುಂಡಪ್ಪ** | 36 |
| ಕೂಸಿನ ಕೈಯಾಗ...... | **ಪ್ರಶಾಂತ ಅಡೂರ** | 39 |


**ಮುಖಪುಟ ವ್ಯಂಗ್ಯಚಿತ್ರ - ನಾಗನಾಥ್**

ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: koravanji42@hotmail.com

ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

*ಮುದ್ರಣ : ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● ಪ್ರಕಾಶ್



ಪಂಚಾಯ್ತಿ ಚುನಾವಣೆ – ಪತ್ರಿಕೆ

**● *ಒಳ್ಳೇ ಪಂಚಾಯ್ತಿ !!***

★★★

ಜಾತಿ ಸಮೀಕ್ಷೆ ಕಷ್ಟ – ಅಂಬರೀಶ್

**● *ಅಲ್ಲ, ಅಸಾಧ್ಯ !!***

★★★

ಕೂದಲಿನ ಮೇಲೆ ತೈಲವನ್ನು ಹಚ್ಚಿದಾಗ ಏನಾದರೂ ಪ್ರಯೋಜನಗಳಾಗುವುದೇ? – ಜಾಹೀರಾತು

**● *ಇಲ್ಲ !!***

★★★

ಪಾರದರ್ಶಕತೆ ವಿರೋಧಿ ಸರ್ಕಾರ – ಸೋನಿಯಾ ಟೀಕೆ

**● *ಗಾಜಿನ ಮನೆಯಲ್ಲಿ ಕಲ್ಲೆಸೆದಂತೆ !!***

★★★

ಕೆರೆಗಳ ಒತ್ತುವರಿ; ಶ್ವೇತ ಪತ್ರಕ್ಕೆ ಆಗ್ರಹ – ಪತ್ರಿಕೆ

**● *'ಕರಾಳ ಪತ್ರ' ಎನ್ನಬೇಕೆ ?!***

★★★

ಬಿ.ಡಿ.ಎ. ಮನೆಗಳ ಬಡಾವಣೆಗಳ ತೆರವಿಲ್ಲ – ಶೀರ್ಷಿಕೆ

**● *ಹೌದು, ನದೀ ಮೂಲ ಹುಡುಕಬಾರದು !!***

★★★

ಚಿನ್ನದಾಸೆ ಭಾರತದ ದೊಡ್ಡ ಸಮಸ್ಯೆ – ವಾಣಿಜ್ಯ ಸುದ್ದಿ

**● *ಸದ್ಯ ನಮಗೆ ಆ ತಲೆನೋವಿಲ್ಲ !!***

★★★

ಧಾರಾವಾಹಿ, ಐ.ಪಿ.ಎಲ್. ಕ್ರಿಕೆಟ್ ವೀಕ್ಷಿಸಬೇಡಿ – ಮಾನ್ಯ ರಾಜ್ಯಪಲರು

**● *ಹೌದು, ಲೋಕ ಸಭಾ ಕಲಾಪಗಳು ಹೆಚ್ಚು ಮನೋರಂಜಕ !!***

★★★

ಜನ ಬಿ.ಎಂ.ಶ್ರೀ. ಮರೆತಿದ್ದಾರೆ – ಹೇಳಿಕೆ

**● *ಬಿ.ಎಂ. ಯಾರು ಸಾರ್ ??***

★★★

# ಎ.ಆರ್. ರಾಜಗೋಪಾಲ್



**ನ**ಮ್ಮ ಅಪರಂಜಿ ಬಳಗದ ಆಪ್ತ ಗೆಳೆಯರಾಗಿದ್ದ, ಎಲೆ ಮರೆಯ ಕಾಯಿಯಂತೆ ಅಪರಂಜಿಯ ಎಲ್ಲ ಸಮಾರಂಭ ಗಳಲ್ಲೂ ಸಂಭ್ರಮದಿಂದ ದುಡಿಯುತ್ತಿದ್ದ ರಾಜಗೋಪಾಲ್ ಮೇ ತಿಂಗಳ ಎರಡರಂದು ನಮ್ಮನ್ನಗಲಿ ಮೋಹನಮುರುಳಿಯ ನಾಡಿಗೆ ಸದ್ದುಗದ್ದಲವಿಲ್ಲದೆ ತೆರಳಿದರು.

ನಾನು ರಾಜಗೋಪಾಲರನ್ನು ಮೊದಲು ಭೇಟಿ ಮಾಡಿದ್ದು 1994ರಲ್ಲಿ. ಆ ವರ್ಷ ನಾವು ಭಾರತೀಯ ವಿದ್ಯಾಭವನದಲ್ಲಿ ಅಪರಂಜಿಯ ಹತ್ತುವರುಷದ ಹಬ್ಬವನ್ನು ಹಮ್ಮಿಕೊಂಡಿದ್ದೆವು. ಆ ದಿನ ಬೆಳಗ್ಗೆ ನಾನು ಹಬ್ಬದ ವ್ಯವಸ್ಥೆಗಳನ್ನು ಮಾಡುವ ತರಾತುರಿಯಲ್ಲಿದ್ದಾಗ ನಗುಮುಖದ ಮಧ್ಯವಯಸ್ಕರೊಬ್ಬರು ನನ್ನ ಬಳಿ ಬಂದು ತಮ್ಮನ್ನು ಪರಿಚಯಿಸಿಕೊಂಡು, ''ಏನಾದರೂ ಕೆಲಸ ಇದ್ದರೆ ಹೇಳಿ ಸಾರ್, ನೀವೊಬ್ಬರೇ ಯಾಕೆ ಓಡಾಡಬೇಕು?'' ಅಂತ ಬಹು ಔದಾರ್ಯದಿಂದ ವಿನಂತಿಸಿಕೊಂಡರು.. ಅಂದು ನಮ್ಮ ಬಳಗವನ್ನು ಸೇರಿದ ರಾಜಗೋಪಾಲ್ ಕಳೆದ ಇಪ್ಪತ್ತೊಂದು ವರ್ಷಗಳು ನಮ್ಮೊಡನೆ ಬಹುವಾಗಿ ಹೊಂದಿಕೊಂಡು, ಇತ್ತೀಚೆಗೆ ಅಪರಂಜಿ ಟ್ರಸ್ಟಿನ ನಿರ್ವಾಹಕ ಜವಾಬ್ದಾರಿಯನ್ನು ಹೊರುವ ಹೊಸ್ತಿಲಿನಲ್ಲೇ ನಮ್ಮನ್ನಗಲಿದ್ದು ನಮ್ಮೆಲ್ಲರಿಗೂ ದಿಗ್ಭ್ರಮೆಯಾಗುವಂತಹ ಸಂಗತಿ.

ರಾಜಗೋಪಾಲ್ ಅವರು ಕೊರವಂಜಿ ಪ್ರೇಮಿ. ಭಾರತೀಯ ವಿದ್ಯಾಭವನದವರು ಕೊರವಂಜಿ ಮತ್ತು ಅಪರಂಜಿಗಳ ಸಮಗ್ರ ಸಂಚಿಕೆಗಳನ್ನು ಸಿಡಿ ರೂಪದಲ್ಲಿ ತರುವುದಕ್ಕೆ ಆರ್ಥಿಕ ಸಹಾಯವನ್ನು ನೀಡುವ ಆಶ್ವಾಸನೆ ಸಿಕ್ಕ ತಕ್ಷಣ ರಾಜಗೋಪಾಲ್ ಆ ಪ್ರಾಜೆಕ್ಟಿನ ಸಂಪೂರ್ಣ ಜವಾಬ್ದಾರಿಯನ್ನು ನಗು ನಗುತ್ತಲೇ ಸ್ವೀಕರಿಸಿದರು.. ಆ ಪ್ರಾಜೆಕ್ಟಿನ ಕೆಲಸದ ಮೇಲೆ ನಾವೆಲ್ಲರೂ ಒಟ್ಟಿಗೆ ಮೈಸೂರಿಗೆ ಮಾಡಿದ ಅನೇಕ ಪ್ರಯಾಣಗಳು ಇಂದಿಗೂ ನನ್ನ ನೆನಪಿನಲ್ಲಿ ಹಸಿರಾಗಿದೆ. ಸಿಡಿ ಸಿದ್ಧವಾದಮೇಲೆ, ನಾನು ಸಿಡಿ ಬಿಡುಗಡೆಯ ಸಮಾರಂಭದಲ್ಲಿ, ''ನೀವೂ ಸ್ಟೇಜ್ ಮೇಲೆ ಕೂತ್ಕೋಬೇಕು ರಾಜಗೋಪಾಲ್'' ಅಂದಾಗ ಆತ ''ಅದೊಂದು ಮಾತ್ರಾ ಹೇಳ್ಬೇಡಿ'' ಅಂತ ವಿನಯವಾಗಿಯೇ ನಿರಾಕರಿಸಿದ್ದು ನೆನಪಿಗೆ ಬರುತ್ತಿದೆ.

ಫೇಸ್ ಬುಕ್‌ನಲ್ಲಿ ರಾಜಗೋಪಾಲ್ ಒಂದು ಕನ್ನಡ ಹಾಸ್ಯದ ಆಂದೋಳನವನ್ನೇ ಸೃಷ್ಟಿಸಿದ್ದು ನಮಗೆಲ್ಲಾ ಹೆಮ್ಮೆಯ ಸಂಗತಿ. ಕೊರವಂಜಿಯ ವ್ಯಂಗ್ಯ ಚಿತ್ರಗಳು, ನಗೆ ಲೇಖನಗಳು, ಕುಹಕಿಡಿಗಳು ಇವನ್ನೆಲ್ಲಾ ಫೇಸ್ ಬುಕ್‌ನಲ್ಲಿನ ಕನ್ನಡ ಹಾಸ್ಯ ಪ್ರೇಮಿಗಳಿಗೆ ನಿರಂತರವಾಗಿ ಉಣಬಡಿಸಿದ್ದು ರಾಜಗೋಪಾಲ್ ಅವರ ನೈಜ ನಗೆಪ್ರೇಮದ ದ್ಯೋತಕ.

ತನ್ನ ಆಪ್ತ ಬಂಧುವಿನ ಅಗಲಿಕೆಗೆ ಇದು ಅಪರಂಜಿಯ ಅಶ್ರು ತರ್ಪಣ.

**ಶಿವಕುಮಾರ್**

# ದ್ವಾರಪಾಲಕರು

**- ವಾಣೀ ಸುರೇಶ್**

**ಗೇ**ಟುಗಳು ಅಂದ ತಕ್ಷಣ ಸಾಧಾರಣವಾಗಿ ಎಲ್ಲರಿಗೂ ಜ್ಞಾಪಕ ಬರೋದು ಎಷ್ಟೋ ದಿನಗಳಿಂದ ಕೀಲೆಣ್ಣೆ ಹಾಕ್ಬೇಕೂಂತಿರೋ ಅವರ ಮನೆ ಕಿರುಗುಟ್ಟೋ ಗೇಟೇನೋ ಅಲ್ವೇ? ಅಥವಾ, ಪಕ್ಕದ ಸೈಟಿನ ಹೊಚ್ಚ ಹೊಸಾ ಅಪಾರ್ಟ್ಮೆಂಟಿನ ಸ್ಟೈನ್ಲೆಸ್ ಸ್ಟೀಲಿನದರಂತೆಯೇ ಕಾಣೋ ದೈತ್ಯಾಕಾರದ ಗೇಟಿರಬಹುದು. ಇಲ್ಲ ಸ್ಕೂಲ್ಗೋ ಆಫೀಸ್ಗೋ ಲೇಟ್ ಆಗಿರೋವಾಗ ನಿಮಿಷಗಳು ಯುಗಗಳಂತೆ ಅನ್ನಿಸೋ ಹಾಗೆ ಮಾಡೋ ತಾಕತ್ತಿರುವ ಮುಚ್ಚಿರುವ ರೈಲ್ವೇ ಗೇಟಿರಬಹುದು. ಅಥವಾ ಮೀರಿ ಹಿರಿಯ ಪ್ರಜೆಗಳಾಗಿದ್ದು ಅರವತ್ತನೇ ಇಸವಿಯ ತೆಲುಗು ತಮಿಳು ಕನ್ನಡ ಸಿನಿಮಾ ಪ್ರಿಯರಾಗಿದ್ದರೆ, ಸದಾ ಆದಿಶೇಷನ ಮೇಲೆ ಪವಡಿಸಿರೋ ಸಾಕ್ಷಾತ್ ಶ್ರೀಮನ್ನಾರಾಯಣನ ಅರಮನೆಯ ಜಯವಿಜಯರು ಕಾಯುವ ಸುಪ್ರಸಿದ್ಧ ವೈಕುಂಠ ದ್ವಾರವೇ ನೆನಪಿಗೆ ಬರಬಹುದು! ಇನ್ನು ಪಾಪಭೀರುಗಳಾಗಿ ಬೈಬಲ್ಲಿನ ಭಕ್ತರಾಗಿದ್ದರಂತೂ ಅವರ ಪರ್ಲ್ ಗೇಟ್ ಜ್ಞಾಪಕಕ್ಕೆ ಬರೋದು ಅತಿ ಸಹಜವೇ ಬಿಡಿ.

ಆದರೆ ಅಷ್ಟೆಲ್ಲಾ ಕಲ್ಪನೆಯಿರದ ನಂಗೆ ಮಾತ್ರಾ ಇಷ್ಟು ದಿನ ಗೇಟೂಂದರೆ ಯಾವಾಗಲೂ ಜ್ಞಾಪಕಕ್ಕೆ ಬರ್ತಿದ್ದಿದ್ದು ನಮ್ಮಜ್ಜಿ ಮನೆಯ ಪುರಾತನವಾದ, ಮರದ ತಿಳಿ ಹಸಿರು ಬಣ್ಣದ ದೊಡ್ಡ ಗೇಟು! ಅದರ ಮೇಲಿಂದಲೇ ಹತ್ತಿ ನಾವು ನಮ್ಮ ಕಾಂಪೌಂಡ್ ಮೇಲೆ ಹಬ್ಬಿಸಿದ್ದ ನಿತ್ಯಮಲ್ಲಿಗೆ ಬಳ್ಳಿಯಿಂದ ರಾಶಿ ರಾಶಿ ಮೊಗ್ಗು ಕಿತ್ತು ನಮ್ಮಮ್ಮ ಚಿಕ್ಕಮ್ಮಂದಿರಿಗೆ ತರತರಾವರಿ ದಂಡೆಗಳು, ವೇಣಿಗಳನ್ನ ಕಟ್ಟಕ್ಕೆ ತಂದುಕೊಡ್ತಿದ್ದಿದ್ದು! ಅದರಲ್ಲೇನು ಮಹಾ ಸ್ಪೆಷಾಲಿಟಿ ಅಂದ್ರಾ? ಹೇಳ್ತೀನಿ ತಡೀರಿ... ಒಂದು ಮುಖ್ಯ ಕಾರಣ ಅಂದರೆ – ಆ ಗೇಟಿನ ಮೇಲೆ ಚಿಲುಕ ಹಾಕುವಲ್ಲಿ ಇದ್ದ ಸುಮಾರು ಒಂದು ಆರೇಳು ಇಂಚಿನಷ್ಟುದ್ದದ ನುಣುಪಾದ ಕಂದುಗಪ್ಪು

---


**✳✳ ಅಪರಂಜಿ ಸದಸ್ಯತ್ವದ ಅಭಿಯಾನ ✳✳**

ನಿಮ್ಮ ಮೆಚ್ಚಿನ ಅಪರಂಜಿ ಈಗ ಸದಸ್ಯತ್ವದ ಅಭಿಯಾನ ಪ್ರಾರಂಭಿಸಿದೆ. ನೀವು ಮಾಡಬೇಕಾದುದು ಇಷ್ಟೇ. ಒಬ್ಬೊಬ್ಬ ಸದಸ್ಯರೂ ತಮ್ಮ ಕಡೆಯಿಂದ ಕನಿಷ್ಠ ಪಕ್ಷ ಇನ್ನೊಬ್ಬರು ಸದಸ್ಯರನ್ನು (ಇನ್ನೂ ಹೆಚ್ಚು ಸದಸ್ಯರನ್ನು ಮಾಡಿದರೂ ಸ್ವಾಗತ) ಅಪರಂಜಿ ಬಳಗಕ್ಕೆ ಸೇರಿಸಿ **ಹತ್ತು ವರ್ಷದ ಚಂದಾದಾರರನ್ನಾಗಿ ಮಾಡಿ**. ಅಪರಂಜಿ ಬೆಳೆಯಲಿ ತಿಳಿಹಾಸ್ಯ ಮನೆ ಮನೆ ಬೆಳಗಲಿ.

ಕೊರವಂಜಿ ಅಪರಂಜಿ ಟ್ರಸ್ಟ್ ಜೊತೆ ನೀವೂ ಕೈ ಜೋಡಿಸಿ ಎಂದು ವಿನಂತಿ.

ಕನ್ನಡಿಯಂತೆ ಹೊಳೆಯುತ್ತಿದ್ದ ಪೈಂಟು ಸವೆದ ಭಾಗ. ಅದನ್ನು ಎಗರಿ ಎಗರೀ ಮುಟ್ಟೋದೇ ಆಗ ನಂಗೊಂದು ಆಟವಾಗಿತ್ತು ಯಾಕೋ ಗೊತ್ತಿಲ್ಲ! ಇನ್ನೊಂದು ಕಾರಣ ಅಂದ್ರೆ – ಅವೆರಡೂ ದೊಡ್ಡ ಗೇಟುಗಳೂ ಪರಸ್ಪರ ಮೇಲ್ಭಾಗದಲ್ಲಿ ತಗುಲಿದಾಗ ಉಂಟಾಗುತ್ತಿದ್ದ ಆಳವಾದ ಗಂಭೀರ ಸ್ವರದ ಶಬ್ದ! ಪಂಡಿತ್ ಜಸ್ ರಾಜರು ತಮ್ಮ ಸಿರಿಕಂಠದ ರಾಜಗಂಭೀರ ಶೈಲಿಯಲ್ಲಿ ಮಂದ್ರ ಸ್ಥಾಯಿಯಲ್ಲಿ ಗುಡುಗಿದಂತೆ ಕೇಳಿಸ್ತಿದ್ದಿದ್ದ ಅದು ಇಂದಿಗೂ ನನ್ನ ಕಿವಿಯಲ್ಲಿ ಗುಂಗಾಗಿ ಕಾಡ್ತಿತ್ತು. ಮೊನ್ನೆ ಮೊನ್ನೆವರ್ಗೂ! ಯಾಕೆ ಹೀಗೆ ಭೂತ ಕಾಲದಲ್ಲೇ ಮಾತಾಡ್ತಿದ್ದೀನಿ ಗೊತ್ತೇ? ಇಷ್ಟು ಕಾಲ ನನ್ನ ಚಿಕ್ಕಂದಿನ ರಮ್ಯತೆಯಲ್ಲಿ ವಿಹರಿಸುತ್ತಿದ್ದಾಗೆಲ್ಲಾ ಕಾಡುತ್ತಿದ್ದ ಆ ಗೇಟಿನ ನೆನಪನ್ನು ಮೊನ್ನೆ ಇಲ್ಲಿಯ ಯಃಕಶ್ಚಿತ್ ಕಬ್ಬಿಣದ ಗೇಟೊಂದು – ''ಕನಸಿನಲೂ ನೀನೇ ಮನಸಲೂ ನೀನೇ ನಿನ್ನಾಣೆ'' – ಅನ್ನೋ ಹಾಗೆ ಅತಿಕ್ರಮಿಸಿಬಿಟ್ಟಿದೆ! ಎಂಥಾ ಗಾಢ ನಿದ್ದೆಯಲ್ಲೂ ಮಧ್ಯ ರಾತ್ರಿಯಲ್ಲಿ ಬೆಚ್ಚುವಂತೆ ಹೊಡೆದೆಬ್ಬಿಸಿ ನನ್ನ ಇಷ್ಟು ವರ್ಷಗಳ ಕುಂಭಕರ್ಣತೆಯನ್ನು ಛಾಲೆಂಜ್ ಮಾಡುತ್ತಿದೆ! ನೋಡಿ ಎಂಥಾ ಅಚಾತುರ್ಯ!

ಅದಾಗಿದ್ದು ಹೀಗೆ! – ''ಪಿಕ್ನಿಕ್ಕಿಗೆ ಹೋಗಕ್ಕೆ ಎಲ್ಲರಿಗೂ ಗೊತ್ತಿರುವ ಪಟೇಲ್ ಪಾಯಿಂಟುಗಳಿಗೇ ಮುಗಿ ಬೀಳುವುದರಲ್ಲಿ ಏನ್ ಮಜಾ ಇರುತ್ತೆ? ಪಿಕ್ನಿಕ್ ಅಂದ್ರೆ ಅಡ್ವೆಂಚರಸ್ ಆಗಿ ಇರಬೇಕು. ಜಾಗ ಚೆನ್ನಾಗೂ ಇರಬೇಕು ಆದರೆ ಅತಿಯತೀ ಜನ ಜಂಗುಳಿಯಿರಬಾರದು. ಮಾತ್ರಾ ಕೊನೇ ಪಕ್ಷದಲ್ಲಿ ಹೋದ ಪ್ರವಾಸಿಗಳಿಗೆ ಬೇಕಾದ ಮಿನಿಮಮ್ ಅನುಕೂಲ ಇರಬೇಕು'' ಅಂತೆಲ್ಲಾ ಅಳೆದೂ ಸುರಿದೂ ಇಲ್ಲಿ ನಮ್ಮನೇಲೊಂದು ಪಾಸ್ ಮಾಡಿರೋ ಅಲಿಖಿತ ಕರಾರಿದೆ. ಅಂದ್ಹಾಗೆ – ''ಪಟೇಲ್ ಪಾಯಿಂಟ್'' ಅಂದರೆ ಇಲ್ಲಿಯ ಜನಪ್ರಿಯ ಪ್ರವಾಸಿ ತಾಣಗಳಿಗೆ ''ಪರದೇಸಿಗಳಾದ'' ನಮ್ಮ ದೇಸಿಗಳು, ಇಟ್ಟಿರುವ ನಾಮಧೇಯ ಅಂತ ಗೊತ್ತಲ್ಲ! ಆದರೆ ಇಷ್ಟೆಲ್ಲಾ ಆದರೂ ನಿಜವಾದ ತಾಪತ್ರಯ ಶುರುವಾಗೋದು ಹೋಗುವ ಸ್ಥಳ ನಿರ್ಧರಿಸುಕ್ಕೆ ಮತ್ತು ಅದಾದಮೇಲೆ ಆಗ ಒಳ್ಳೇ ಯಾವ ಅಸೆಂಬ್ಲಿಗೂ ಕಡಿಮೆಯಿಲ್ಲದಂತೆ ನಮ್ಮನೆಯ ಡೆಮಾಕ್ರಸಿಯಲ್ಲಿ ವಾಗ್ಯುದ್ಧಗಳು. ಮಾತಿನ ಚಕಮಕಿಗಳು ಶುರುವಾಗಿಬಿಡತ್ತೆ. ಅವತ್ತಾದದ್ದೂ ಅಷ್ಟೇ....

''ಈ ಸಲ, ಹೊರಡೋ ಮೊದಲು ಗೂಗಲಮ್ಮನ ಪ್ರಶ್ನೆ ಕೇಳಿ, (ಶಕುನ ವಿಚಾರಿಸಲ್ಲವಲ್ಲ ಸದ್ಯ!) ನಮ್ಮ ಪಿಕ್ನಿಕ್ ಸ್ಪಾಟಿನ ಮ್ಯಾಪ್ ಅನ್ನು ಚೆನ್ನಾಗಿ ಸ್ಟಡಿ ಮಾಡಿ, ರಸ್ತೆ ಸ್ವಲ್ಪ ಮೇಲೆ ನಿಗಾ ಇಟ್ಕೊಂಡು ಪ್ರಕೃತಿಯನ್ನ ಎಂಜಾಯ್ ಮಾಡ್ತಾ ಹೋದ್ರೆ ಸಾಕು'' – ಅಂತನ್ನೋದು ಆಡಳಿತ ಪಕ್ಷದ ಮತವಾದರೆ, ಉಳಿದ ಭಿನ್ನಮತೀಯರ ಅಭಿಪ್ರಾಯವೇ ಬೇರೆ. (ಅದು ಭಿನ್ನವಾಗಿರಲೇಬೇಕಾದದ್ದು ನಿಯಮ ಅಲ್ಲವೇ?) ಈ ಹಾಲು ಜೇನಿನ ನಾಡಿನ ವಸ್ತುನಿಷ್ಠ ವಿಲಾಸಿ ಜೀವನ ಶೈಲಿಗೆ ಹೆಚ್ಚು ಒತ್ತು ಕೊಡುವ ಈ ಪಕ್ಷದವರ ಪ್ರಕಾರ –

''ಜಿ.ಪಿ.ಎಸ್. ಇರೋದು ಯಾತಕ್ಕೆ ಇಂಥಾ ಸಮಯಗಳಲ್ಲಿ ಉಪಯೋಗಿಸದಿದ್ದರೆ? ಸುಮ್ನೆ ಅದ್ರಲ್ಲಿ ನಾವು ಹೋಗ್ಬೇಕಿರೋ ಅಡ್ರೆಸ್ ಟೈಪ್ ಮಾಡಿ ಸ್ಟಿಯರಿಂಗ್ ಹಿಡ್ಕೊಂಡು ಕೂತ್ರಾಯ್ತಪ್ಪ (ಆಫ್ ಕೋರ್ಸ್ ಕಣ್ಣು ಮುಚ್ಕೊಳ್ಳದೆ!). ಇನ್ನು ಎಡ ಬಲ ಹೈವೇ ನಂಬರ್ರು

ಅದ್ನೆಲ್ಲಾ ಯಾಕೆ ಗಮನಿಸ್ಕೊಂಡು ಹೋಗ್ಬೇಕು, ಅಂಥಾ ಚೆನ್ನಾಗಿ ಜಿ.ಪಿ.ಎಸ್ಸಿನ ಧ್ವನಿ ರಸ್ತೆಯುದ್ದಕ್ಕೂ ವಟಗುಟ್ಟಕ್ಕಿರುವಾಗ'' – ಅಂತ ಅವರ ಅಂಬೋಣ!

''ದಿನಗಟ್ಟಲೇಲಿ ಮನೇಲಿ ಅನುಭವಿಸೋ (ಅ) ಸಮರಸತೆಯ ಅನಿವಾರ್ಯ ವಟವಟದಿಂದ ತಪ್ಪಿಸಿಕೊಳ್ಳಕ್ಕೆ ಅಂತಲೇ ಹೊರಟಿರುವಾಗ, ಇನ್ನು ಜಿ.ಪಿ.ಎಸ್ಸಿನ ವಟಗುಟ್ಟೋದನ್ನೇ ಗಮನವಿಟ್ಟು ಕೇಳಿಸಿಕೋಬೇಕೂಂದ್ರೆ ಇನ್ನು ಅಡ್ವೆಂಚರ್ ಎಲ್ಲಿಂದ್ ಬರುತ್ತೆ'' – ಅಂತ ಆ.ಪ.ದವರ ವಾದ! ಹಾಗೂ–ಹೀಗೂ ಜಗ್ಗಾಟ ನಡೆದು ಕೊನೆಗೆ ಭಿನ್ನಮತೀಯರೇ ಗೆದ್ದರೂಂತಿಟ್ಕೊಳ್ಳಿ. ಹೀಗಾಗಿ ಬೇರೆ ಏರಿಯಾದ ನಾಲ್ಕನೇ ಉನ್ನತ ಶಿಖರವಾದ, ಚಾರಣಕ್ಕೆ ಮತ್ತೊಂದು ಹೆಸರಾದ, ಹತ್ತೂವರೆ ಸಾವಿರ ಮೀಟರ್ ಎತ್ತರದ ಮೌಂಟ್ ಉಮನ್ನುಮ್‌ಗೆ, ಅಂತೂ ಅವತ್ತು ಶನಿವಾರ ಬೆಳಗ್ಗೆ ನಾವು ಕೊನೆಗೂ ಹೊರಟ್ವಿ, ಆಫ್ ಕೋರ್ಸ್ – ''ಮೌಂಟ್ ಉಮನ್ನುಮ್–ಆ? ಅದೆಲ್ಲಿದೆ? ಇಲ್ಲೇ ಹತ್ತಿರವೋ ಅಥವಾ?....'' – ಅಂತೆಲ್ಲಾ ಕೇಳಿದ ಬಂಧು ಮಿತ್ರರ ಮಾಮೂಲಿನ ಪ್ರಶ್ನಾವಳಿಗಳಿಗೆ ಮಾತ್ರ ಆ.ಪ.ದವರೂ ಭಿ.ಮ.ರೂ ಸಹಮತದಿಂದ ಉತ್ತರ ಕೊಟ್ಟರು!

ಸರಿ ಅವತ್ತು, ಶನಿವಾರದ ಬೆಳಗ್ಗೇನೂ ಇಷ್ಟ ಬಂದಷ್ಟು ಹೊತ್ತು ಮಲಗುಕ್ಕೆ ಬಿಡದಿದ್ದಕ್ಕೆ ದುಮುಗುಟ್ಟುತ್ತಿದ್ದ ಮಕ್ಕಳನ್ನೂ ರೆಡಿ ಮಾಡಿ, ಅವರ ಬಾಯಿಗಳಿಗೊಂದಿಷ್ಟು ಹಾಲು–ಸೀರಿಯಲ್–ಗಳನ್ನು ತುರುಕಿ, ಇನ್ನು ದೊಡ್ಡೋರು – ''ವೀಕೆಂಡಲ್ಲೂ ಓಟ್ಸೇ ತಿನ್ಬೇಕೇ'' ಅಂತ ಗೊಣಗಾಡುತ್ತಿದ್ದನ್ನೂ ಜಾಣಕಿವುಡು ಮಾಡ್ಕೊಂಡು ಕೇಳಿಸಿಕೊಳ್ಳದೇ, ಅಂತೂ ಇಂತೂ ಏನೋ ಒಂದು ಬ್ರೇಕ್ ಫಾಸ್ಟ್ ಅಂತ ಗದುಕಿಕೊಂಡು ಮನೆ ಬಿಟ್ಟಿದ್ದಾಯ್ತು. ಉಮನ್ನುಮ್ಮಿಂದ ಕೆಳಗಿಳಿದು ಬಂದಮೇಲೆ ಯಾವುದಾದರೂ ಒಳ್ಳೆಯ ಇಂಡಿಯನ್ ರೆಸ್ಟೋರೆಂಟಿಗೆ ಹೋಗುವ ಪ್ಲಾನ್ ಇದ್ದಿದ್ದರಿಂದ ಕೈಗಾವಲಿಗಾಗಿ ಒಂದೆರಡು ಬಿಸ್ಕೆಟ್ ಪ್ಯಾಕೆಟ್ಟುಗ್ಗಳು, ಸ್ವಲ್ಪ ನೀರು, ಚಿಕ್ಕ ಮಕ್ಕಳ ಸಿಪ್ಪಿ ಕಪ್ಪುಗಳಲ್ಲಿ ಒಂದಿಷ್ಟು ಹಾಲು ಮತ್ತು ನಮ್ಮ ನಮ್ಮ ಸ್ವೆಟರು ಜ್ಯಾಕೆಟ್ಟುಗಳನ್ನು ಎತ್ಕೊಂಡು ಕೈ ಬೀಸಿಕೊಂಡು ಹೊರಟ್ವಿ. ವ್ಯಾನಿನ ಜಿ.ಪಿ.ಎಸ್ಸಿಗೆ ಉಮನ್ನುಮ್ಮಿನ ಅಡ್ರೆಸ್ ಹಾಕಿ, ವ್ಯಾನಿನ ಹೊಟ್ಟೆಯನ್ನೂ ತುಂಬಿಸಿದ್ದೂ ಆಯ್ತು.

ಕಳೆದ ವಾರವೆಲ್ಲಾ ಸುರಿದಿದ್ದ ಮಳೆಯಿಂದ ಸಾಂಟಾ ಕ್ರೂಜ್ (ಕ್ಯಾಲಿಫೋರ್ನಿಯಾ) ಪರ್ವತ ಶ್ರೇಣಿ ಇನ್ನೂ ಹಚ್ಚ ಹಸುರಾಗಿ ಕಾಣುತ್ತಿತ್ತು. ರಸ್ತೆಯುದ್ದಕ್ಕೂ ಮಕ್ಕಳ ನರ್ಸರಿ ರೈಮ್ಸಿನ ಅರಚಾಟದೊಂದಿಗೆ ಒಂದೇ ಸಮನೆ ಆಗೀಗ ಜಿ.ಪಿ.ಎಸ್. ಸುಂದರಿಯ (?) ಮಿಸ್ ಮಾಡುಕ್ಕಾಗದಂಥಹ ಒಂದು ನಮೂನೆಯ ಧ್ವನಿಯಲ್ಲಿ ರಸ್ತೆಯ ಮಾರ್ಗದರ್ಶನ ಬೇರೆ ತಲೆ ಕೆಡಿಸ್ತಿತ್ತು. ಇವೆಲ್ಲದರ ಪರಿವೆಯೇ ಇಲ್ಲದ ವ್ಯಾನು, ನಾಲ್ಕು ಲೇನುಗಳ ಭವ್ಯ ರಸ್ತೆ – ಮೂರು ಲೇನಾಗಿ ಬದಲಾಗಿ, ಮುಂದೆ ಎರಡು ಲೇನಾಗಿ, ಕೊನೆಗೆ ನಮ್ಮ ಚಾಮುಂಡಿ ಬೆಟ್ಟದ ದಾರಿ ತರಹ ಒಂದು ಲೇನಾದ ಹಾವಿನಂಥಾ ಅಂಕು ಡೊಂಕು ರಸ್ತೆಯಲ್ಲಿ ಬೆಟ್ಟದ ಶಿಖರದತ್ತ ಅರವತ್ತು ಮೈಲಿ ಸ್ಪೀಡಿನಲ್ಲಿ ಧಾವಿಸುತ್ತಿತ್ತು. ಕೊನೆಗುಳಿದ ಆ ಒಂದು ಲೇನು ಯಾವಾಗ ನಮ್ಮ ಮುಳ್ಳಯ್ಯನ ಗಿರಿಯ ರಸ್ತೆಯಂತೆ ತೀರಾ ಕಡಿದಾಗಿ ಅಸ್ವಾಭಾವಿಕವಾಗಿ ಚಿಕ್ಕದಾಯಿತೋ ಆಗ ಮತ್ತೆ ಆ.ಪ. ಮತ್ತು ಭಿನ್ನಮತೀಯರು ಕಣ್ಣು ಕಣ್ಣು ಬಿಟ್ಟರು.

ಮೊದಲಿಗೆ ಭಿ.ಮ. – ''ಹೇ ಇದೇನೋ ಇದು! ರಸ್ತೆ ಇಷ್ಟು ಹೋಪ್ ಲೆಸ್ಸಾಗಿದೆ! ಎದುರಿಂದ ಯಾವ ವೆಹಿಕಲ್ಲೂ ಬರ್ತಿಲ್ಲ ಬೇರೆ!''

ಆ.ಪ. – ''ನಂಗೇನು ಗೊತ್ತು? ನಿನ್ನ ಐಡಿಯಾದ ಹಾಗೆ ಚಾಚೂ ತಪ್ಪದೆ ಮಾಡಿದ್ನಲ್ಲ. ಹೋಗಿ ನಿನ್ನ ಜಿ.ಪಿ.ಎಸ್ಸನ್ನೇ ಕೇಳ್ಕೋ ಬೇಕಾದ್ರೆ. ಅದು ಹೇಳಿದ್ಕಡೆ ಬಂದಿದ್ದೀನಪ್ಪಾ...''

ಭಿ.ಮ. – ''ಅದೇನೋ ಸರಿ. ಆದ್ರೂ ಯಾಕೋ.... ಸರಿಸರಿ ಮುಂದೆ ಹೋಗು, ನೋಡೇ ಬಿಡೋಣ. ಇಷ್ಟು ದೂರವೇ ಹತ್ತಿ ಬಂದಿದ್ದಾಗಿದೆಯಲ್ಲ.''

ಆ.ಪ. – ''ಹಿಂದೆ ತಿರುಗಕ್ಕಿಲ್ಲಿ ಜಾಗವಾದರೂ ಎಲ್ಲಿದೆ? ಒಂದ್ಕಡೆ ಬೆಟ್ಟ, ಇನ್ನೊಂದ್ಕಡೆ ಪ್ರಪಾತ! ಎದುರಿನ್ಂದ್ಲೂ ಯಾರೂ ಬರ್ದೇದ್ರೆ ಸಾಕಾಗಿದೆ ಸದ್ಯ!''

ಹಾಗಂದುಕೊಂಡೇ ಮುಂದಕ್ಕೆ ಹೋಗಿದ್ದಾಯ್ತು. ಹೇಗಿದ್ದರೂ ಅಷ್ಟೊತ್ತಿಗೆ ಹೆಚ್ಚು ಕಡಿಮೆ ಶಿಖರದ ತುದಿಯ ಹತ್ತಿರ ಹತ್ತಿರ ಬಂದಿದ್ದಾಗಿತ್ತಲ್ಲ! ಇನ್ನೇನು ತಲುಪಿದೆವು ಅಂದಾಗ ಇದ್ದಕ್ಕಿದ್ದ ಹಾಗೇ ಅಲ್ಲಿಯವರೆಗೂ ನಾವು ಬಂದ ಟಾರಿನ ರಸ್ತೆ, ಯಾವ ಸೂಚನೆಯನ್ನೂ ಕೊಡದೇ ಆಘಾತಕಾರಿಯಾಗಿ ಇದ್ದಕ್ಕಿದ್ದ ಹಾಗೆ ಮುಗಿದೇ ಹೋಗಿತ್ತು! ಮುಂದೆ ರಸ್ತೆಯಿದ್ದ ಸ್ಥಳದಲ್ಲಿ ನಿಲ್ಲಿಸಿದ್ದ ಎತ್ತರವಾಗಿದ್ದ ಎರಡು ಕಬ್ಬಿಣದ ಕಂಭಗಳು, ಅದರ ಒಂದು ಕಂಭಕ್ಕೆ ಹೊಂದಿಸಿದಂತೆ ಕೇವಲ ಮೂರು ಗಟ್ಟಿ ಮುಟ್ಟಿಯಾಗಿದ್ದ ಕಂಬಿಗಳನ್ನು ತ್ರಿಕೋಣಾಕಾರದಲ್ಲಿ ಸೇರಿಸಿ ಮಾಡಿದ್ದ ಒಂದು ದೊಡ್ಡ ದಢೂತಿಯಾಗಿದ್ದ ಗೇಟಿತ್ತು! ತುಕ್ಕು ಹಿಡಿದು ಒಳ್ಳೇ ಯಾವುದೋ ತಾತನ ಕಾಲದ ಪಳೆಯುಳಿಕೆಯಂತಿದ್ದ ಅದಂತೂ ಪ್ರಪಾತದ ಪಕ್ಕಕ್ಕೆ ರಸ್ತೆಯಗಲದಷ್ಟಕ್ಕೂ ಪೂರ್ತಿಯಾಗಿ ತೆರೆದುಕೊಂಡು ದಟ್ಟವಾಗಿ ಬೆಳೆದಿದ್ದ ಪೊದೆಗಳನ್ನು ಒತ್ತರಿಸಿ ಅದರ ಭಾಗವಾಗಿಯೇ ಬೆಳೆದು ನಿಂತಹಾಗಿತ್ತು! ಆ ಗೇಟಿನ ಮೇಲೆ, ಕಂಡೂ ಕಾಣದ ಹಾಗೆ – ನೋ ಟ್ರೆಸ್ ಪಾಸಿಂಗ್ ಅಂತ ಕೆಂಪಗಿನ ಸಣ್ಣಕ್ಷರದಲ್ಲಿ ಬರೆದ, ಇನ್ನಷ್ಟು ತುಕ್ಕು ಹಿಡಿಸಿಕೊಂಡಿದ್ದ ಒಂದು ಪುಟಾಣಿ ಬೋರ್ಡು! ಇದಿಷ್ಟೂ ಸಾಲದೂಂತನ್ನೋ ಹಾಗೆ ನಮ್ಮ ಜಿ.ಪಿ.ಎಸ್. ಸುಂದರಿ ಬೇರೆ, – ಇದೇ ನಿಮ್ಮ ಡೆಸ್ಟಿನೇಷನ್ನು, ಧನ್ಯವಾದಗಳು'' ಅಂತ ಕೊನೆಯದಾಗಿ ಒದರಿ ತೆಪ್ಪಗಾದಳು!

ಈಗ ನಮಗಿದ್ದಿದ್ದದ್ದು ಮೂರೇ ಆಯ್ಕೆಗಳು.

1) ಟ್ರೆಸ್ ಪಾಸಿಂಗ್ ಮಾಡಿದ್ದರಿಂದ ಅದರಲ್ಲೂ ಈ ದೇಶದಲ್ಲಿ ಆಗುವ ಮುಂದಿನ ತೀವ್ರ ಪರಿಣಾಮಗಳ ಬಗ್ಗೆ ಹೆಚ್ಚು ಯೋಚಿಸದೇ ಗೇಟಿನೊಳಗೆ ಹೋಗಿ ರಿವರ್ಸ್ ಮಾಡಿ, ಬಂದ ದಾರಿಗೆ ಸುಂಕವಿಲ್ಲ ಎಂದು ಹಿಂದಿರುಗುವುದು.

2) ಇಲ್ಲ, ಪಕ್ಕದಲ್ಲೇ ಇದ್ದ ಕಮರಿಯ ಪಾತಾಳಕ್ಕೆ ಬೀಳದಂತೆ ಆ ತಿರುವುಗಳಲ್ಲೇ ಮೈಲಿಗಟ್ಟಲೆ ರಿವರ್ಸ್ನಲ್ಲೇ ಹೋಗಿ, ತಿರುಗಿಸಲು ಸಾಧ್ಯವಾಗುವಷ್ಟಗಲದ ರಸ್ತೆ ಸಿಗುವವರೆಗೂ ರಿವರ್ಸಿನಲ್ಲೇ ಡ್ರೈವ್ ಮಾಡೋದು! ಇಲ್ಲ

3) ನಿಂತಲ್ಲೇ ನಿಂತು ''ಕಿಮ್ ಕರ್ತವ್ಯಂ?'' ಎಂದು ಯೋಚಿಸುತ್ತಾ ಗೇಟನ್ನೇ ಮುಂದೆಯೇ ವ್ಯಾನಿನ ಹೀಟರ್ ಚಾಲನೆಗೆ ವ್ಯಾನಿನ ಬ್ಯಾಟರಿ ಇರುವವರೆಗೂ ವಿಷ್ಣು ಸಹಸ್ರನಾಮ

ಹೇಳ್ತಾ ಯಾವುದಾದರೂ ಪವಾಡ ಜರುಗುತ್ತೇನೋಂತ ಕಾಯ್ತಾ ನಿಂತ್ಕೊಳ್ಳೋದು!

ಅದ್ಯಾವುದೋ ವಿಷಘಳಿಗೆಯಿರಬೇಕು, ಯಾಕೆಂದರೆ ಭಿ.ಮ.ರು – ''ಏನಾಗಲ್ಲ, ಈ ಗೇಟು ಬಾದರಾಯಣನ ಕಾಲದಿಂದಲೂ ತೆಕ್ಕೊಂಡೇ ಇರೋ ಹಾಗಿರೋದ್ರಿಂದ ಟ್ರೆಸ್ ಪಾಸಿಂಗ್ ರೂಲ್ಸ್‌ಗೆ ಅಂಥಾದ್ದೇನೂ ಹೆದರಬೇಕಿಲ್ಲ. ಇಲ್ಲಿ ಯಾರೂ ವಾಸವಾಗಿರೋ ಹಾಗಿಲ್ಲ. ಸುಮ್ಮನೆ ಒಳಗೆ ಹೋಗಿ ಬೇಗ ರಿವರ್ಸ್ ಮಾಡ್ಕೊಂಡು ಬಂದರಾಯ್ತು, ನಡೀರಿ'' – ಅಂತಂದಿದ್ದು ಹೆಚ್ಚು ಚರ್ಚೆಗೊಳಗಾಗದೇ ಪಾಸಾಗೇ ಹೋಯಿತು! ಆದರೆ ಆಗ ಒದ್ದುಗೊಂಡು ಬಂತು ನೋಡಿ ಗ್ರಹಚಾರ!....

ಅಲ್ಲಾ, ನಮ್ಮ ವ್ಯಾನು ಪೂರ್ತಿ ಒಳಗೆ ಹೋಗೋವರೆಗೂ ನಿಶ್ಚಲವಾಗಿ ಪೊದೆಗಳ ಮಧ್ಯ ದೆವ್ವದಂತೆ ಹುದುಗಿ ಕಾದಿದ್ದ ಆ ತುಕ್ಕು ಹಿಡಿದ ಪ್ರಾರಬ್ಧ ಗೇಟು, ಇದ್ದಕ್ಕಿದ್ದ ಹಾಗೆ ಪ್ರಾಣಸಂಚಾರವಾಗಿಬಿಟ್ಟೇನೋ ಅನ್ನೋ ಹಾಗೆ, ನಾವಿನ್ನೂ ಪೂರ್ತಿಯಾಗಿ ತಿರುಗಕ್ಕೂ ಮುಂಚೆ ಅಸಹಾಯಕರಾಗಿ ನೋಡ್ತಿದ್ದ ನಮ್ಮ ಕಣ್ಣೆದುರಿಗೇ, ಕಿರುಗುಟ್ಕೊಂಡು ಮುಚ್ಚಿಕೊಂಡು ಬಿಡೋಣವೇ!!

ಇಂಥಾ ಎಮರ್ಜೆನ್ಸಿಯಲ್ಲಿ ನಮ್ಮ ಅಸೆಂಬ್ಲಿಯ ತುರ್ತು ಸೆಷನ್ ಸಹಾ ತಕ್ಷಣ ಎಚ್ಚೆತ್ತಿತು. ಆ.ಪ. – ಈಗೇನು ಮಾಡೋದು? ಎಲ್ಲಾ ಈ ಸ್ಟುಪಿಡ್ ಜಿ.ಪಿ.ಎಸ್ಸಿಂದಾದ ಫಜೀತಿ, ನಾನು ತಲೆ ಚಚ್ಚಿಕೊಂಡೆ ಮ್ಯಾಪ್ ಸ್ಟಡಿ ಮಾಡಿ ಹೊರಡೋಣಾಂತ, ಕೇಳಬೇಕಲ್ಲ!

ಭಿ.ಮ. – ಅಡ್ವೆಂಚರ್ ಬೇಕೂಂತೀರಲ್ಲ ಎಲ್ಲರೂ, ಈಗ ಅನುಭವಿಸಿ...

ಹೀಗೆ ಬಿಸಿಯೇರಿದ ಚರ್ಚೆಯಿಂದಲೇ ಬಿರುಸಾಗಿ ಚಾಲನೆಗೊಂಡ ಸೆಷನ್ನು, ಜಿ.ಪಿ.ಎಸ್ಸಿನ ಸುಂದರಿಯೊಂದಿಗೆ ಒಂದೇ ಸಮ ಅಲ್ಲೀವರೆಗೂ ''ರೊಟ್ಟಿ ಅಂಗಡಿ ಕಿಟ್ಟಪ್ಪ, ಚೆನ್ನಮಲ್ಲಕ್ಕ, ಒಂದು ದಿನ ಪೆದ್ದನ ಹೆಂಡತಿ'' – ಅಂತ ನಮ್ಮ ದೇಶದಲ್ಲಿರುವ ಆ ಎಲ್ಲರನ್ನೂ ಕರೆದು ಕರೆದೂ ಸಾಕಾಗಿದ್ದ ಚಿಳ್ಳೆಪಿಳ್ಳೆಗಳೂ ಮಲಗಿ ನಿದ್ದೆಮಾಡ್ತಿದ್ದಿದ್ದರಿಂದ. ಅಸೆಂಬ್ಲಿಯ ಸದಸ್ಯರಿಗೆ ಹೆಚ್ಚು ಗದ್ದಲ ಮಾಡುವ ಧೈರ್ಯ ಸಾಲದೇ, ಅದು ಅಷ್ಟೇ ಬೇಗ ಮುಗಿಯಲೇಬೇಕಾಯಿತು.

ಗೇಟಿನಾಚೆಯ ಬದಿಯಿಂದಲೂ ನೆತ್ತಿಯ ಮೇಲೆ ಢಾಳಾಗಿ ಕಾಣಿಸ್ತಿದ್ದಿದ್ದ ನೀಲಿ ಆಕಾಶ, ಗೇಟಿನೊಳಗೆ ನಾವು ನಿಂತ ಕಡೆಯಿಂದ ಕೆಸರಿನಲ್ಲಿ ಕಾರಿನ ಚಕ್ರದ ಗುರುತನ್ನು ಮೂಡಿಸಿ ತ್ರಿಶೂಲದಾಕಾರದಲ್ಲಿ ತೀರಾ ಕಡಿದಾದ ಇಳಿಜಾರಿನತ್ತ ಸಾಗಿದ್ದ ಮೂರು ಚಿಕ್ಕ ರಸ್ತೆಗಳು, ಧರಿಸಿದ್ದ ಜ್ಯಾಕೆಟ್ಟನ್ನೂ ತೂರಿಕೊಂಡು ಮೂಳೆಗಳವರೆಗೂ ಹೋಗಿ ಚುಚ್ಚುವಂತಿದ್ದ ಛಳಿಯನ್ನು ಬಿಟ್ಟು ಮಿಕ್ಕೆಲ್ಲವೂ ಹೀಗೇ ಶತ ಶತಮಾನಗಳಿಂದಲೂ ಸ್ತಬ್ಧವಾಗೇ ನಿಂತಿರಬಹುದೆನ್ನಿಸುತ್ತಿದ್ದ ದೃಶ್ಯವೈಭವ ನಮ್ಮ ಕಣ್ಣೆದುರಿನಲ್ಲಿ ರಾರಾಜಿಸುತ್ತಿತ್ತು! ಛಳಿಗಾಲವಾದ್ದರಿಂದ ಹಕ್ಕಿ ಪಕ್ಷಿಗಳ ಕಲರವವೇ ಆಗಲಿ ಕೊನೆಗೆ ಕ್ರಿಕೆಟ್ಟುಗಳ ತೀವ್ರವಾದ ಶಬ್ದವಿಶೇಷ ಕೂಡಾ ಇಲ್ಲದೇ ಸುತ್ತಲಿನ ಕಾಡೂ ಸಹಾ ಮೌನವಾಗಿದ್ದಿದ್ದು ಪರಿಸ್ಥಿತಿಯ ಗಂಭೀರತೆಯನ್ನು ಮನದಟ್ಟು ಮಾಡಿಸ್ತಿತ್ತು..

ಅವತ್ತಿನ್ನೂ ಶನಿವಾರವಾದ್ದರಿಂದ ಮತ್ತು ಅದು ನ್ಯೂ ಇಯರ್ಸ್ ಡೇಯೊಂದಿಗೆ ಹೊಂದಿಕೊಂಡು ಬಂದ ಲಾಂಗ್ ವೀಕೆಂಡಾದದ್ದರಿಂದ, ಅಲ್ಲದೇ ನಮ್ಮೊಂದಿಗಿದ್ದ ಮಕ್ಕಳು ಮತ್ತು ಯಾರಿಗೂ ಸರಿಯಾದ ಊಟ ತಿಂಡಿ ತಿನಿಸುಗಳಿಲ್ಲದೇ ಹೊರಟು ಬಂದಿದ್ದರಿಂದ, ಎಲ್ಲಾದಕ್ಕಿಂತ ಹೆಚ್ಚಾಗಿ ಯಾರ ಸೆಲ್ ಫೋನಿನಲ್ಲೂ ಸಿಗ್ನಲ್ಲಿಲ್ಲದಿದ್ದರಿಂದ ನಮ್ಮೆಲ್ಲರ ಮನಸ್ಸಲ್ಲಿ ಅವಲಕ್ಕಿ ಭತ್ತ ಕುಟ್ಟುವಿಕೆ ಪ್ರಾರಂಭವಾಯಿತು. ಕೊನೆಗೆ, ನಮ್ಮಲ್ಲಿನ ಸಾಹಸ ಪ್ರವೃತ್ತಿಯವರಾದವರು ನಮ್ಮ ಬದರಿ ನಾಯಿಯ ಜೊತೆಯಲ್ಲಿ ಕೆಳಗಿಳಿದು ಹೋಗಿ ಏನಾದರೂ ಸಹಾಯ ಸಿಗುವುದೇ ಎಂದು ನೋಡುವುದೇ ಸರಿ ಎಂಬ ತೀರ್ಮಾನಕ್ಕೆ ಪಿಸುಮಾತಿನ ಮೂಲಕವೇ ಒಂದು ಒಪ್ಪಂದವಾಯಿತು. ಯಾವಾಗಲೂ ಭಂಡ ಧೈರ್ಯಕ್ಕೆ ಹೆಸರಾದ ನಾನೂ ತೆಪ್ಪಗೆ ಛಳಿಯಲ್ಲಿ ಸುಮ್ಮನೆ ಕೂತಿರಲಾರದೇ ಈ ಇಬ್ಬರು ಸದಸ್ಯರ ಪಾರ್ಟಿಗೆ ಸೇರ್ಪಡೆಯಾದೆ!...

ನಾವು ತ್ರಿಶೂಲದ ರಸ್ತೆಯ ಬಲ ಭಾಗದ ಇಳಿಜಾರಿನಲ್ಲಿ ಹೆಜ್ಜೆ ಹಾಕಿ ಸುಮಾರು ಅರ್ಧ ಮೈಲಿಯಷ್ಟು ನಡೆದಾಗ ಸಿಕ್ಕಿದ್ದು ಬಂಗಲೆಯಂತಿದ್ದ ಆ ಮನೆ. ಮನೆಗೆ ಹೊಂದಿಕೊಂಡಂತಿದ್ದ ಕಾರು ನಿಲ್ಲಿಸುವ ದೊಡ್ಡ ದೊಡ್ಡ ಆದರೆ ಖಾಲಿಯಾಗಿದ್ದ ಗರಾಜುಗಳು, ನಾಯಿಗಳಿಗಾಗಿ ಮನೆ, ಇನ್ನೂ ದೂರದಲ್ಲಿದ್ದ ಖಾಲಿ ಕುದುರೆ ಲಾಯಗಳು, ಮನೆಯ ಮುಂದೆ ನಿಂತಿದ್ದ ಆರ್.ವಿ. (ರಿಕ್ರಿಯೇಶನ್ ವೆಹಿಕಲ್) ಎಂದು ಕರೆಸಿಕೊಳ್ಳುವ ಒಂದು ದೊಡ್ಡ ಹಳೆಯದಾದ ಮೋಟಾರ್ ಹೋಮ್ ಇತ್ಯಾದಿಗಳು ಕಂಡವು. ಆದರೆ ಮಾತ್ರಾ ಯಾವ ಜೀವಿಯ ಕುರುಹೂ ಇರಲಿಲ್ಲ! ಮತ್ತೆ ಹಿಂದಿರಿಗಿಬಂದು ಮಧ್ಯದ ಇಳಿಜಾರಿನಲ್ಲಿ ಸಾಕಷ್ಟು ನಡೆದಾಗ ಕಂಡಿದ್ದು ಹಿಂದಿನಂತೆಯೇ ಇನ್ನೊಂದು ಹಳೆಯ ದೊಡ್ಡ ಮನೆ, ನಾಯಿ ಮನೆಗಳು, ಹಳೆಯ ಕಾರುಗಳು, ಟ್ರ್ಯಾಕ್ಟರ್‌ಗಳು, ಖಾಲಿ ಲಾಯಗಳು... ಆದರೆ ಮತ್ತೆ ಎಲ್ಲಾ ಸ್ತಬ್ಧ ಚಿತ್ರಗಳೇ! ಆ ರಸ್ತೆಯೇನೋ ಇನ್ನೂ ಮುಂದೆ ಇಳಿಜಾರಲ್ಲಿ ಸಾಗಿದ್ದರೂ ಮುಂದೆ ಹೋಗಿ ಪರೀಕ್ಷಿಸುವ ಹುಮ್ಮಸ್ಸೇ ಸಾಲದಾಗಿತ್ತು. ಅಲ್ಲದೇ ಪುನಃ ನಮ್ಮ ವಾಹನಕ್ಕೆ ತಲುಪಲು ಆ ಕಡಿದಾದ ದಾರಿಯಲ್ಲಿ ಮೇಲೆ ನಡೆಯಬೇಕಿತ್ತಲ್ಲ! ಎಲ್ಲೋ ದೂರದಲ್ಲಿ ನಾಯಿ ಬೊಗಳಿದ ಸದ್ದಿನಂತೆ ಕೇಳಿಸಿದರೂ ಬದರಿಯ ಪ್ರತಿಕ್ರಿಯೆ ಬೇರೆ ಇರದದ್ದರಿಂದ ಅದು ಗಾಳಿಯ ಮೊರೆತವೋ ನಮ್ಮ ಭ್ರಮೆಯೋ ಅನ್ನುವಂತಿತ್ತು. ನಮ್ಮ ಸ್ಕೌಟಿಂಗ್ ಟ್ರಿಪ್ ವಿಫಲವಾಗಿ ಏದುಸಿರುಪಡುತ್ತಾ ಇನ್ನೂ ಹೆಚ್ಚಾದ ಹಸಿವು ಬಾಯಾರಿಕೆಗಳ ಜೊತೆಯಲ್ಲಿ ನಮ್ಮ ವ್ಯಾನಿಗೆ ಬಂದಿದ್ದಾಯ್ತು.. ತ್ರಿಶೂಲದ ಮೂರನೆಯ ಕವಲನ್ನು ಪರೀಕ್ಷಿಸೋ ಆಸಕ್ತಿಯಂತೂ ಯಾರಲ್ಲೂ ಇರಲಿಲ್ಲ... ಹಾಗೇ ಆ ಗೇಟನ್ನೇ ದಿಟ್ಟಿಸುತ್ತಾ ಜಪ ಮಾಡುತ್ತಾ ಯುಗಗಳಿಗೆ ಸಮನಾದ ಘಂಟೆಗಳು ಕಳೆದವು. ಅಷ್ಟೊತ್ತಿಗೆ ಅದು ಹೇಗೋ ಎಲ್ಲರ ಹಾಸ್ಯ ಪ್ರಜ್ಞೆಗಳೂ ಜಾಗ್ರತೆಗೊಂಡದ್ದರಿಂದ ಓದಿದ ಕೇಳಿದ ಜೋಕುಗಳು ಪಿಸುಧ್ವನಿಯಲ್ಲೇ ಹರಿದಾಡಲಾರಂಭಿಸಿದವು. ಸ್ವಲ್ಪ ಹೊತ್ತಿನಲ್ಲೇ ಅವೂ ಮುಗಿದು. ಹೌದೋ ಅಲ್ಲವೋ ಅನ್ನುವ ಹಾಗೆ ಆಕಾಶದಲ್ಲಿ ಹೊತ್ತು ಇಳಿಯುವ ಲಕ್ಷಣ ಮೂಡಿ ಹಸಿವು ತಾರಕಕ್ಕೇರುತ್ತಿದ್ದಾಗ ಎಲ್ಲೋ ದೂರದಲ್ಲಿ ಕೇಳಿಸಿದ್ದು ಆ

ಕಾರಿನ ಎಂಜಿನ್ ಶಬ್ದ! ಜೊತೆಗೆ ಎಷ್ಟು ಸುಮ್ಮನಿರಿಸಲು ಪ್ರಯತ್ನಿಸಿದರೂ ಕೇಳಲೊಲ್ಲದ ಬದರಿಯ ಗುರುಗುಟ್ಟುವಿಕೆ! ಥಟ್ಟನೆ ಎಲ್ಲರ ಜಾಗೃತಗೊಂಡ ಮನಸ್ಸುಗಳು, ಎಲ್ಲರ ಮುಖಗಳಲ್ಲೂ ನಸುನಗುವನ್ನು ಅರಳಿಸಿ, ಆಶಾಭಾವಗಳನ್ನು ಮಿನುಗಿಸಿದವು! ಮುಂದಿನ ಒಂದೆರಡು ನಿಮಿಷಗಳಲ್ಲಿ ನಮ್ಮ ವ್ಯಾನಿನ ಪಕ್ಕಕ್ಕೆ ಬಂದು ಆಪದ್ಬಾಂಧವನಂತೆ ನಿಂತಿತ್ತು ಮತ್ತೊಂದು ಕಾರು!

ಇದ್ದಕ್ಕಿದ್ದ ಹಾಗೇ ನಡೆದ ಆ ಪ್ರಕ್ರಿಯೆಯಿಂದ ಎಲ್ಲರಲ್ಲೂ ಶಕ್ತಿ ಸಂಚಾರವಾಯಿತು. ಪಕ್ಕದ ಕಾರಿಂದ ಒರಟಾಗಿ ಕಾಣುತ್ತಿದ್ದ ಹಿರಿಯ ದಂಪತಿಗಳೊಂದಿಗಿದ್ದ ಒಂದು ದೈತ್ಯಾಕಾರದ ನಾಯಿ ಮತ್ತು ಅದರ ಕುನ್ನಿಯೊಂದು ಬದರಿಯೊಂದಿಗೆ ಸಂಭಾಷಣೆಗಿಳಿದವು.... ಈ ಗಲಾಟೆಗೆ ಮಕ್ಕಳೂ ಎದ್ದು ರಾಗ ತೆಗೆದವು. ನಡೆದ ವಿದ್ಯಮಾನವನ್ನು ಕೆಲವೇ ವಾಕ್ಯಗಳಲ್ಲಿ ತಿಳಿಸಿದ ತಕ್ಷಣ ಕ್ಷಣಾರ್ಧದಲ್ಲಿ ಪರಿಸ್ಥಿತಿಯನ್ನು ಗ್ರಹಿಸಿದ ಆತ, ಗೇಟಿನ ಹಿಂದೆ ಸಿಕ್ಕಿ ಹಾಕಿಕೊಂಡಿದ್ದ ಈ ಸಂಸಾರಸ್ಥರ ನೆರವಿಗೆ ಗಹಗಹಿಸುತ್ತಾ ಧಾವಿಸಿದ.

ಹಿಂದಿನಿಂದ ಅವನ ಪತ್ನಿಯ ವರಾತ ದೊಡ್ಡ ಧ್ವನಿಯಲ್ಲಿ ಕೇಳಿಸುತ್ತಿತ್ತು. ''ನಿಂಗೆ ಎಷ್ಟ್ ಸಲ ಹೇಳಿದ್ದೀನಿ ಜಾರ್ಜ್, ಮೊದಲು ಈ ಗೇಟು ಸರಿ ಮಾಡೂಂತ. ನೀನು ಕೇಳಬೇಕಲ್ಲ! ಮೊದಲು ಹೊಸ ಗೇಟ್ ಹಾಕಿ ಅದರ ಸೆನ್ಸರ್‌ನ ಸರಿ ಮಾಡು, ಟ್ರೆಸ್ಸ್ ಪಾಸಿಂಗ್‌ನ ಬೋರ್ಡಂತೂ ಸರಿಯೇ ಸರಿ. ಅದನ್ನೂ ಸರಿಯಾಗಿ ದೊಡ್ಡದಾಗಿ ಬರೀ. ಇಲ್ಲ ನಿನ್ನ ಕೈಯಲ್ಲಿ ಕಿಸಿಯದಿದ್ದರೆ ಯಾರ ಕೈಯ್ಯಲ್ಲಾದರೂ ಮಾಡಿಸು. ಇಲ್ಲದಿದ್ದರೆ ನಾನಂತೂ – ಅಮ್ಮಾ ಬಾ ಬಾ ಅಂತ – ಒಂದೇ ಸಮ ಕರೀತಾನೇ ಇರೋ ಲಿಂಡಾ ಮನೆಗೆ ಹೊರಟು ಹೋಗ್ತೀನಿ ಅಷ್ಟೇ. ಈ ಗೇಟೋ ಸರಿಯಾಗಿ ಹಾಕ್ಕೋಳ್ಳೋದೂ ಇಲ್ಲ... ನಿನ್ನೆ ನೀನು ವಾಪಸ್ ಬಂದ್ಮೇಲಿಂದ ಹೀಗೆ ತೆಕ್ಕೊಂಡೇ ಇರ್ಬೇಕು! ಇದೇ ಆಗ್ತಿದ್ರೆ ಏನ್ ಗತಿ.. ನಿನಗಂತೂ ಯಾವುದೂ ಬೇಕಿಲ್ಲ, ನೀನಾಯ್ತು ನಿನ್ನ ಸಿಗಾರ್ ಆಯ್ತು, ಟೀವಿ ಮುಂದೆ ಕೂತರೆ ನಾನು ಎಷ್ಟು ಹೊಡ್ಕೊಂಡರೂ ಅಷ್ಟೇ.... ಇಲ್ಲೇನು ಒಂದು ಪಾರ್ಟೀನೇ ಮಾಲೇ... ದಿನ ಬೆಳಗಾಗೆದ್ದರೆ ಅದೇ ಗೋಳು... ಮಕ್ಕಳು ದೊಡ್ಡೋರಾಗ್ಲಿ ನೋಡೋಣ ಅಂದೆ... ಅದೂ ಆಯ್ತು.. ಮೊಮ್ಮಕ್ಳು ಬಂದಾಗ ಇರುಕ್ಕೆ ಚೆನ್ನ ಅಂದೆ... ನಂಗೂ ಸಾಕಾಯ್ತು ಇಷ್ಟು ವರ್ಷ.. ನನ್ನನ್ನು ಏನೂನ್ತಂಕೊಂಡಿದ್ದೀಯಾ.. ಮೊನ್ನೆ ನನ್ನ ಫ್ರೆಂಡ್ಸ್‌ಗಳು ಬಂದಾಗ್ಲೂ ಅದೇ ಹೇಳ್ತಿದ್ರು.... ಇತ್ಯಾದಿ ಇತ್ಯಾದಿ... ಇನ್ನು ಜಾರ್ಜ್ ಬಾಯಲ್ಲಿ ಸಿಗಾರ್ ಕಚ್ಚಿಕೊಂಡೇ ಹುಸಿ ನಗೆ ನಗ್ತಾ ಗೇಟಿನ ಬಳಿ ಹೋಗಿ ಅದೇನನ್ನೋ ಸರಿಪಡಿಸಿ ಬಂದು ತನ್ನ ಕಾರು ಹತ್ತಿ ಮತ್ತೆ ಗೇಟಿನ ಕಡೆ ರಿಮೋಟ್ ತಿರುಗಿಸಿ ಬಟನ್ ಒತ್ತಿದ..''

ಅಲ್ಲಿಗೆ ನಮ್ಮ ದ್ವಾರಪಾಲಕತನದ ವನವಾಸ ಮುಗಿದು ನಾಗರೀಕತೆಯತ್ತ ಮತ್ತೆ ತಿರುಗಿದೆವು. ಎಲ್ಲರ ಮನಸ್ಸಲ್ಲೂ ಇಂಡಿಯನ್ ರೆಸ್ಟುರಾಂಟಿನಲ್ಲಿ ಮಾಡಬೇಕಾದ ಆರ್ಡರ್ ಬಗ್ಗೆ ಚಿಂತನ–ಮಂಥನ ನಡೀತಿತ್ತು. ಅಂತ ಬೇರೆ ಹೇಳಬೇಕಿಲ್ಲ ಅಂತ ಅನ್ಕೊಂಡಿದ್ದೀನಿ!

*

# ಅಪರೂಪದ ಅನುಭವಗಳು

**- ಎಚ್. ಗೋಪಾಲಕೃಷ್ಣ**

ನಿಮಗೆ ಈ ಅನುಭವಗಳು ಆಗುತ್ತಾ? ನಾನು ಸುಮಾರು ಜನ ನನ್ನ ಸ್ನೇಹಿತರುಗಳನ್ನು ಈ ಬಗ್ಗೆ ಹಲವಾರು ವರ್ಷಗಳ ಕಾಲ ಎಡಬಿಡದೆ ವಿಚಾರಿಸಿದ್ದೇನೆ. ನನಗೆ ಆಗಿರುವ ಅನುಭವಗಳು ಇವರು ಯಾರಿಗೂ ಆಗೇ ಇಲ್ಲವಂತೆ. ಅದರಿಂದ ನನಗೆ ನಾನೇ ವಿಭಿನ್ನನಾದವನು ಎನ್ನುವ ಒಂದು ರೀತಿಯ ಪ್ರತ್ಯೇಕತಾ ಮನೋಭಾವ ಮನಸ್ಸಿನಲ್ಲಿ ಹುಟ್ಟಿಬಿಟ್ಟಿದೆ. ನಾನೇ ಬೇರೆ, ನಾನೇ ವಿಚಿತ್ರದವನು, ನಾನು ಇವರೆಲ್ಲರಿಗಿಂತಲೂ ಡಿಫರೆಂಟು ಎನ್ನುವ ಭಾವನೆ ಮನಸ್ಸಿನಲ್ಲಿ ಹುಟ್ಟಿದರೆ ನೀವು ಒಂದುರೀತಿ ಸೀಬೈ ಟೂ ಆಗಿಬಿಡುತ್ತೀರಿ, ಈಗ ನನ್ನ ಪರಿಸ್ಥಿತಿಯೂ ನನ್ನ ಬಂಧುಗಳ ಮುಂದೆ ಹೀಗೇ ಆಗಿದೆ.

ಇಂತಹ ವಿಚಿತ್ರ ಸನ್ನಿವೇಶದಿಂದ ಹೊರಬರಲು ನಾನು ಪಡುತ್ತಿರುವ ಪಾಡು ವಿವರಿಸುವ ಮೊದಲು ನನ್ನ ಅನುಭವಗಳ ಒಂದು ಝಳಕ್ (ಇದು ಝಳಕ್ ಇರಬಹುದೇ?) ನಿಮಗೆ ನೀಡಲೇ ಬೇಕು.

ಈಗ ಅದರ ಒಂದು ಸ್ಯಾಂಪಲ್ಲು.......

ನನ್ನ ಗೆಳೆಯರು ಯಾರಿಗಾದರೂ ಅದೇನು ಸಮಸ್ಯೆ ಉಂಟಾದರೂ ಅಂತಹ ಸಮಸ್ಯೆ ನನಗೇತಕ್ಕೆ ಬಂದಿಲ್ಲ ಅಂತ ದೊಡ್ಡಯೋಚನೆ ನನಗೆ ಶುರುವಾಗಿಬಿಡುತ್ತೆ. ಉದಾಹರಣೆಗೆ ನನ್ನ ಗೆಳೆಯ ಯಾರೋ ಒಬ್ಬನಿಗೆ ಕಣ್ಣಿಗೆ ಪೊರೆ ಬಂದಿದೆ, ಅವನು ಕಣ್ಣಿನ ಡಾಕ್ಟರ ಬಳಿ ಹೋಗಿ ಕಣ್ಣಿನ ಪೊರೆ ತೆಗೆಸಲು ಒಡಾಡ್ತಾ ಇದಾನೆ ಅನ್ನುವ ಸುದ್ದಿ  ನಿನ್ನ ಕಿವಿಗೆ ಬಿತ್ತು ಅಂತ ಇಟ್ಕೊಳ್ಳಿ....

ಹೋಗಿ ಹೀಗೆ ಹುಷಾರಿಲ್ಲದೇ ಇರುವ ಸ್ನೇಹಿತನ ಮನೆಗೆ ಹೋಗಿ ಅವನ ಸಮಸ್ಯೆ ಏನು, ಯಾರಾದರೂ ವೈದ್ಯರ ಬಳಿ ಅವನನ್ನ ಕರೆದುಕೊಂಡು ಹೋಗಬೇಕೇ? ಅವನಿಗೆ ಏನಾದರೂ ಆರ್ಥಿಕ ನೆರವು ನೀಡಬೇಕೇ.. ಈ ರೀತಿಯ ಕ್ರಿಯೇಟೀವ್ ಯೋಚನೆಗಳು ಮೊದಲು ತಲೆಗೆ ಬರ್ತಾ ಇತ್ತು. ಈ ಹೊಸಾ ತಲೆನೋವು ನನಗೆ ಶುರುವಾದಾಗಲಿಂದ ಈ ರೀತಿಯ ಯೋಚನೆಗಳು ತಲೆಯಲ್ಲಿ ಸುಳಿಯುವುದಿಲ್ಲ, ಬದಲಿಗೆ ನನ್ನ ತಲೆ, ನನ್ನ ಗೆಳೆಯನ ವಯಸ್ಸು,ಅವನು ಮಾಡುತ್ತಿದ್ದ ಅಥವಾ ಮಾಡುತ್ತಿರುವ ಕೆಲಸ, ಅವನು ಪಡೆಯುತ್ತಿರುವ ಪಗಾರ, ಅವನ ಹೆಂಡತಿ, ಮಕ್ಕಳು ಮೊದಲಾದವುಗಳನ್ನು ಲೆಕ್ಕ ಹಾಕುತ್ತದೆ. ನನಗೂ ಅವನಿಗೂ ತೌಲನಿಕ ಅಧ್ಯಯನ ಮಾಡುತ್ತದೆ ಮತ್ತು ತೌಲನಿಕ ಅಧ್ಯಯನ ಮುಗಿದ  ನಂತರ ತೌಲನಿಕವಾಗಿಯೇ ಅದೊಂದು ಹೊಸಾ ಚಿಂತನೆಗೆ ಅವಕಾಶ ಮಾಡುತ್ತದೆ! ಅದು ಹೇಗೆ ಅಂದರೆ ಗೆಳೆಯನಿಗೆ ನನಗಿಂತಲೂ ಪಗಾರ ಹೆಚ್ಚಿರುವುದರಿಂದ ಅವನಿಗೆ ನನಗಿಂತಲೂ ಮೊದಲೇ ಕಣ್ಣಿನ ಪೊರೆ ಬಂದುಬಿಟ್ಟಿತೇ? ಅವನ ಹೆಂಡತಿ ಚೆನ್ನಾಗಿ ಇಂಗ್ಲಿಷ್

ಮಾತನಾಡುವುದರಿಂದ ಅವನಿಗೆ ನನಗಿಂತಲೂ ಮೊದಲೇ ಪೊರೆ ಬಂದಿತೇ? ಆತನ ಮಕ್ಕಳು ನನ್ನ ಮಕ್ಕಳಿಗಿಂತಲೂ ಹೆಚ್ಚು ಓದಿರೋದು, ಹೆಚ್ಚು ಸಂಬಳ ತಗೊಳ್ಳೋದೂ ಅವನಿಗೆ ಪೊರೆ ಮೊದಲು ಬರಲು ಕಾರಣವೇ? ನಾನು ಒಂದು ಸ್ಲಂನಲ್ಲಿ ಇದೀನಿ, ಆತ ನಗರದ ಪೋಷ್ - ಪ್ರತಿಷ್ಠಿತ ಏರಿಯಾದಲ್ಲಿದಾನೆ - ಈ ಕಾರಣದಿಂದ ಅವನಿಗೆ ಈ ಪೊರೆ ಮೊದಲೇ ಬಂದಿತಾ? ಈ ಧಾಟಿಯಲ್ಲಿ ನನ್ನ ಯೋಚನೆಗಳು ಹರಿಯುತ್ತವೆ.

ಮತ್ತೊಂದು ಸ್ಯಾಂಪಲ್ಲು......

ನನಗೆ ಗೊತ್ತಿರುವ ಒಬ್ಬರು ಗೆಳೆಯರು ಇಲ್ಲೇ ನಮ್ಮ ಮನೆಯಿಂದ ಸ್ವಲ್ಪ ದೂರದಲ್ಲಿ ವಾಸವಿದ್ದಾರೆ. ಮೊನ್ನೆ ಅವರ ಮನೆಗೆ ಒಂದು ಹಾವು ಬಂದು ಸೇರಿಕೊಂಡು ಬಿಟ್ಟಿತು. ಪಾಪ ಆತ ಅದೇನೇನು ಪಾಡು ಪಟ್ಟ, ಹಾವು ಹಿಡಿಯುವವರು ನಿನಗೆ ಗೊತ್ತಾ? ನನ್ನ ಮನೆಗೆ ಹಾವು ಸೇರಿಕೊಂಡಿದೆ, ಮನೆಯವರೆಲ್ಲರೂ ಭಯ ಪಟ್ಟುಕೊಂಡು ಮನೆಯ ಆಚೆ ಕೂತಿದ್ದೇವೆ ಅಂತ ಫೋನಾಯಿಸಿದ. ಇದಕ್ಕೆ ಕಾರಣ ಅಂದರೆ ನಾನು ಆತನಿಗಿಂತಲೂ ಸುಮಾರು ವರ್ಷ ಮೊದಲೇ ಈ ಏರಿಯಾಕ್ಕೆ ಬಂದು ಸೇರಿಕೊಂಡಿರುವುದು ಹಾಗೂ ನನ್ನ ಮನೆಯಲ್ಲೂ ಹಾವುಗಳು ಸೇರಿಕೊಂಡು ನಾನು ಹಾವು ಹಿಡಿಯುವವರ ಫೋನುಗಳನ್ನು ಸಂಗ್ರಹಿಸಿರುವುದು.

ಗೆಳೆಯ ಫೋನಾಯಿಸಿ ಹಾವು ಹಿಡಿಯುವರ ಫೋನು ನಂಬರು ಕೇಳಿದರೆ ಸಾಮಾನ್ಯ ಮನುಷ್ಯ ಏನು ಮಾಡುತ್ತಾನೆ? ಕೂಡಲೇ ನಂಬರು ಹುಡುಕಿ ತಿಳಿಸುತ್ತಾನೆ ಮತ್ತು ಅವರಿಗೆ ಸಮಾಧಾನ ಹೇಳುತ್ತಾನೆ, ಎಂಥಹದಾದರೂ ಸಹಾಯ ಬೇಕೇ ಎಂದು ವಿಚಾರಿಸುತ್ತಾನೆ.. ಆದರೆ ನನ್ನ ತಲೆ ಓಡಿದ್ದೇ ಬೇರೆ ರೀತಿಯಲ್ಲಿ, ಆತನ ಏರಿಯಾದಲ್ಲಿ ಅಷ್ಟೊಂದು ಮನೆಗಳಿರಬೇಕಾದರೆ ಇವನ ಮನೆಯನ್ನೇ ಹಾವು ಯಾಕೆ ಹಿಡಿಯಿತು? ಇವನ ಮನೆ ಕಟ್ಟಿದ ಮೇಸ್ತ್ರಿ ಯಾರು ಅವನು ಕಟ್ಟಿರುವ ಎಲ್ಲಾ ಮನೆಗಳಲ್ಲಿಯೂ ಹಾವು ಬಂದಿದೆಯೇ? ಮನೆಕಟ್ಟಿದವನಿಗೂ ಹಾವಿಗೂ ಏನಾದರೂ ಸಂಬಂಧ ಇದೆಯೇ.. ಈತ ಅಂದರೆ ನನ್ನ ಗೆಳೆಯನ ಪಟಾಲಂಗಳು ಹಿಂದೆ ಹಾವು ಸಾಕಿದ್ದವೇ? ಗೆಳೆಯ ಅವನ ಬಾಲ್ಯದ ದಿವಸದಲ್ಲಿ ಹಾವಿನ ಸಂಗಡ ಸಂಸಾರ ನಡೆಸಿದ್ದನೇ?........ ಹೀಗೆ ಸಂಸಾರ ನಡೆಸಿದ್ದರೆ ಅದು ಅವನ ಮನೆಯವರಿಗೆ ಗೊತ್ತಿದೆಯೇ.. ಇದಕ್ಕೆ ಅಂದರೆ ಈ ಯೋಚನೆ ಬರಲು ಹೀಗೆ ತಲೆಯೊಳಗೆ ನುಸಿಯಲು ಅದೇನು ಕಾರಣವಿರಬಹುದು ತಲೆ ಕೆಡಿಸಿಕೊಂಡು ಬಿಟ್ಟೆ, ಸರಿಯಾದ ಉತ್ತರ ಸಿಗಲಿಲ್ಲ,

ಇಂತಹ ವಿಚಿತ್ರ ಯೋಚನೆಗಳು ಬಂದರೆ ಏನಾಗುತ್ತೆ ಹೇಳಿ? ನನಗೂ ಅದೇ ಆಗಿರೋದು - ಯಾರ ಹತ್ತಿರವೂ ಸಲೀಸಾಗಿ ಮನಸ್ಸು ಬಿಚ್ಚಿ ಮಾತನಾಡುವ ಹಾಗೇ ಇಲ್ಲ..! ಎಲ್ಲರೂ ನಮ್ಮನ್ನ ಕಂಡರೆ ದೂರ ಓಡುತ್ತಾರೆ ಮತ್ತು ಇದ್ದಕ್ಕಿದ್ದ ಹಾಗೇ ಇಡೀ ಪ್ರಪಂಚದ ಸಕಲ ಜೀವಿಗಳೂ ನಿಮಗೆ ಶತೃಗಳಾದ ಹಾಗೆ ಅನಿಸಿಬಿಡುತ್ತದೆ  ಮತ್ತು ಅದರಲ್ಲಿರುವ ಎಲ್ಲಾ ಜೀವಾತ್ಮಗಳೂ ದುಷ್ಮನ್‌ಗಳಾಗಿ ಪರಿವರ್ತಿತರಾಗಿಬಿಡುತ್ತಾರೆ!

ಪರಿಸ್ಥಿತಿ ಹೀಗೆ ಆದಾಗ ಎಲ್ಲರೂ ಅದೇನು ಮಾಡ್ತೀವೀ? ಕೈಯಲ್ಲಿ ಕಾಸು ಇದ್ದು ಅದನ್ನ ಯಾರಿಗಾದರೂ ದಕ್ಷಿಣೆ ರೂಪದಲ್ಲಿ ಸಲ್ಲಿಸುವ ಇರಾದೆ ಇದ್ದರೆ ನೇರವಾಗಿ ಡಾಕ್ಟರ ಹತ್ತಿರ ನಡೀತೀವಿ. ನನ್ನ ಕೈಯಲ್ಲಿ ಯಾವಾಗಲೂ ಕಾಸಿಗೆ ಬರ. ಆದರಿಂದ ನಾನು ಮನೆ ವೈದ್ಯ ಮಾಡಿಕೊಳ್ಳುವಲ್ಲಿ ಒಂದು ರೀತಿಯ ಎಕ್ಸ್‌ಪರ್ಟ್! ಕಾಸಿನ ಕರ್ಚಿಲ್ಲದೇ ಆಗುವ ಕೆಲಸ ಇದು. ಮನೆಯಲ್ಲಿಯೇ ಕುಳಿತು ವೈದ್ಯರಾಗಿರಿ. ಸೀರೀಸಿನ ಹಲವಾರು ಪುಸ್ತಕಗಳನ್ನು ಅರೆದು ಕುಡಿದಿರುವವನು ನಾನು. ಮನೆ ವೈದ್ಯದಲ್ಲಿ ಸುಮಾರು ಪಂಡಿತರು ಹೇಳುವುದು ಹಾಲಿಗೆ ಅರಿಶಿನ ಹಾಕ್ಕೊಂಡು ಕುಡೀರಿ, ಹುಲ್ಲುಗರಿಕೆ ಸಣ್ಣಗೆ ಹೆಚ್ಚಿಕೊಂಡು ಮಿಕ್ಸಿಗೆ ಹಾಕಿ ನುಣ್ಣಗೆ ಮಾಡಿ ಅದರ ರಸ ಕುಡೀರಿ, ಹಸುವಿನ ಹಾಲಿಗೆ ಅರಿಶಿನ ಹಾಕಿ ಬಾದಾಮಿ ಬೆರೆಸಿ ದ್ರಾಕ್ಷಿ ಸೇರಿಸಿ ಕಲ್ಲುಸಕ್ಕರೆ ಪುಡಿ ಮಾಡಿ ಕಲಕಿ ಕಾಯಿಸಿ ಕುಡೀರಿ, ತಲೇಗೆ ಹರಳೆಣ್ಣೆ ಹಚ್ಚಿಕೊಂಡು ಮೂರು ತಾಸು ಬಿಸಿಲಿನ ಶಾಖ ಕೊಡಿ ಮೈಗೆ......... ಸಾಕಷ್ಟು ಬೆಳ್ಳುಳ್ಳಿ ಅರೆದು ಅಥವಾ ಜಗಿದು ತಿನ್ನಿ ಅಂತ... ಈ ರೀತಿಯ ವೈದ್ಯಗಳು.

ಯಾರಿಗೂ ತಿಳಿಯದ ಹಾಗೆ ನನಗೆ ಈ ಮನೆ ವೈದ್ಯ ಮಾಡಿಕೊಳ್ಳುವಲ್ಲಿ ಆಸಕ್ತಿ ಹೆಚ್ಚು ಮತ್ತು ಇದು ನನಗೆ ತುಂಬಾ ಖುಷಿ ಕೂಡ ಕೊಡುತ್ತೆ – ಚಿಕ್ಕಂದಿನ ನೆನಪುಗಳು ಓಡೋಡಿ ಬರುತ್ತೆ ಯಾರಿಗೂ ತಿಳಿಯದ ಹಾಗೆ ಮಸಾಲೆ ತಿಂದಿದ್ದರಿಂದ ಹಿಡಿದು ಎಂಥೆಂಥಾ ನೆನಪುಗಳು ಒತ್ತರಿಸಿ ಬರುತ್ತವೆ ಅಂದರೆ ಏಕ್ ದಂ ಇಪ್ಪತ್ತು ವರ್ಷ ಚಿಕ್ಕವನಾದೆ ಅನಿಸಿಬಿಡುತ್ತೆ! ಸುಲಭವಾಗಿ ಮಾಡಿಕೊಳ್ಳಬಹುದಾದ ಮನೆ ವೈದ್ಯ ತೆಗೆಯುವುದು ಮತ್ತು ಅದರಲ್ಲಿ ಸುಮಾರು ದಪ್ಪವಿರುವ ಬೆಳ್ಳುಳ್ಳಿಯನ್ನು ಆರಿಸಿಕೊಳ್ಳುವುದು, ಆಚೆ ಬಂದು ಅದರ ಸಿಪ್ಪೆ ಸುಲಿದು ಒಂದು ಹಿಡಿಯಷ್ಟು ಬಾಯಿಗೆ ಹಾಕಿಕೊಂಡು ಜಗಿಯುವುದು.... ಬೆಳ್ಳುಳ್ಳಿ ಜಗಿಯುವ ಅಭ್ಯಾಸ ನಿಮಗಿಲ್ಲ ಎಂದರೆ ನಿಮ್ಮನ್ನು ಕುರಿತು ನನ್ನದೊಂದು ಅಯ್ಯೋ ಪಾಪ! ಜೀವನದಲ್ಲಿ ಅಮೂಲ್ಯವಾದ ಒಂದು ಮನೆ ವೈದ್ಯವನ್ನು ನೀವು ಕಳೆದುಕೊಳ್ಳುತ್ತಿರುವಿರಿ ಎಂದು ನನ್ನ ಪ್ರಬಲವಾದ ನಂಬಿಕೆ.

ಸರಿ, ಬೆಳ್ಳುಳ್ಳಿ ಆರಿಸಿದೆನಾ? ಅದನ್ನು ಆಚೆ ತಂದೆನಾ? ಕಾಂಪೌಂಡಿನ ಹತ್ತಿರ ಮಾವಿನ ಮರದ ನೆರಳ ಕೆಳಗೆ ಕೂತೆನಾ? ಅದನ್ನು ಬಿಡಿಸಿ ಒಂದು ಹಿಡಿಯಷ್ಟು ಕೈಗೆ ತೆಗೆದುಕೊಂಡೆನಾ? ಅದನ್ನು ಬಾಯಿಗೆ ಹಾಕಿಕೊಂಡು ಜಗಿಯಲು ಆರಂಭಿಸಿದೆ. ನನ್ನಾಕೆ ಆಚೆ ಎಲ್ಲೋ ಹೋಗಿದ್ದವಳು ಗೇಟು ತೆಗೆದು ಒಳಬಂದಳು.

ಇದೇನು ಮಾಡ್ತಿದೀರಿ ಇಲ್ಲಿ? ಅದೇನು ಬಾಯ್ತುಂಬ ತುರುಕಿಕೊಂಡಿದೀರೀ...... ಅಂತ ಒಂದೇ ಸಮ ವಿರೋಧ ಪಕ್ಷದವರು ಪ್ರಶ್ನೆ ಕೇಳುವ ಹಾಗೆ ಪ್ರಶ್ನೆ ಎಸೆದಳು. ಎರಡು ನಿಮಿಷ ತಡಿ ಅಂತ ಸಂಜ್ಞೆ ಮಾಡಿದೆ. ಪೂರ್ತಿ ಅಗೆದು ನುಂಗಿ ಅದೇನು ಬಾಯ್ತುಂಬ ಇತ್ತು ಅಂತ ವಿವರ ನೀಡಲು ಬಾಯಿ ತೆರೆದೆ. ವೊಯಕ್ ಅಂತ ಅವಳು ಹಿತ್ತಲಿಗೆ ಓಡಿದಳು. ಅಲ್ಲಿ ಬಚ್ಚಲಿನಲ್ಲಿ ವಯಕ್ ವಯಕ್ ಮುಂದುವರೀತು. ಅದೆಷ್ಟೋ ಹೊತ್ತಾದ ಮೇಲೆ ಆಚೆ

ಬಂದಳು. ಎರಡು ದಿವಸ ಮಾತಾಡಬಾರದು ಅಂತ ಶರತ್ತು ಹಾಕಿದಳು. ಎರಡು ದಿವಸದ ನಂತರ ದೂರದಿಂದಲೇ ನನ್ನ ಮೂಗಿನಿಂದ ಇಪ್ಪತ್ತು ಸಲ ಉಸಿರಾಡಿಸಿ ಅದೇನು ನೀವು ಮೊನ್ನೆ ಮಾಡಿದ್ದೂ? ಅದ್ಯಾಕೆ ಅರ್ಧಕೇಜಿ ಬೆಳುಳ್ಳಿ ಮುಕ್ಕಿದ್ದಿರಿ? ಅಂತ ಕೇಳಿದಳು.

ಅರ್ಧಕೇಜಿನಾ? ಅಂತಕಣ್ಣು ಬಿಟ್ಟೆ.

ಅವತ್ತು ಬೆಳಿಗ್ಗೇ ತಾನೇ ಮನೆ ಮುಂದೆ ಮಂಕರೀಲಿ ಹಾಕಿಸಿಕೊಂಡಿದ್ದೆ....... ಅಂದಳು.

ಅದೇನೋ ವ್ಯಾಧಿ ರಟ್ಟು ಅಂತ ಗಾದೆ ಇದೆಯಂತೆ ಕೇಳೀದೀರಾ? ಹೆಂಡತಿ ಎದುರು ಯಾಕೆ ಈ ವ್ಯಾಧಿಯನ್ನ ಮುಚ್ಚಿಡಬೇಕು ಅನಿಸಿತು. ಅವಳನ್ನ ಎದುರು ಕೂಡಿಸಿಕೊಂಡು ಹಲವಾರು ತಿಂಗಳಿನಿಂದ ನಾನು ಪಡುತ್ತಿರುವ ಪಾಡು ವಿವರಿಸಿದೆ.

ಮೊದಮೊದಲು ಸೀರಿಯಸ್ಸಾಗಿ ಕೂತು ನನ್ನ ಮಾತು ಆಲಿಸಿದಳು. ನಂತರ ಪೊಸಿಷನ್ ಬದಲಾಯಿಸಿ ನನ್ನ ಮಾತು ಕೇಳಿದಳು. ಅರ್ಧದ ನಂತರ ಅದು ಯಾಕೋ ನನಗೆ ಬೆನ್ನು ಮಾಡಿ ಕೂತಳು ಮತ್ತು ನನ್ನ ಮಾತು ಮುಂದುವರೆದ ಹಾಗೆ ಅವಳ ಮೈ ಕುಲುಕುಲುಕುತಿತ್ತು..! ಪಾಪ ಮನೇಲೆ ಇರ್ತಾಳೆ, ಮೈಗೆ ಜಿಗಣೆ ಹೊಕ್ಕಿರಬಹುದು ಅಂತ ಅಂದುಕೊಂಡು ನಾನು ನನ್ನ ಪಾಡಿಗೆ ನನ್ನ ಕಥೆ ಮುಂದುವರೆಸಿದ್ದೆ. ಕಥೆ ಮುಕ್ತಾಯಕ್ಕೆ ಬಂದು ನೋಡು ನನ್ನ ಪಾಡು ಈಗ ಹೀಗಾಗಿದೆ ಅಂತ ಮೂಗು ಒರೆಸಿಕೊಂಡೆ. ಅವಳು ನನ್ನ ಕಡೆ ತಿರುಗಿದಳು - ಮುಖ ಪೂರ್ತಿ ಕೆಂಪಗಾಗಿತ್ತು, ಕಣ್ಣಿನಲ್ಲಿ ಅದೇನೋ ಅವ್ಯಕ್ತ ಆನಂದ ಕಾಣುತ್ತಿತ್ತು!

ಇದೇನು ನನ್ನ ಪಾಡು ಕಂಡು ನಿನಗೆ ವ್ಯಥೆ ಆಗ್ತಿಲ್ಲವೇ? ಅಂದೆ.

ವ್ಯಥೇನೇ.. ಸಂಕಟ ಆಗ್ತಿದೆ..

ಮತ್ತೆ ಕಿಸಕಿಸ ನಗ್ತಿದ್ದೀ..

ನಗದೇ ಏನ್ಮಾಡ್ಲೀ ನಿಮ್ಮ ಅವತಾರ ನೋಡೀ.

ಅದಕ್ಕೇನುತ್ತರಕೊಟ್ಟೀರೀ? ತೆಪ್ಪಗಾದೆ.

ಒಂದೆರೆಡು ವಾರದಲ್ಲಿ ನನ್ನ ಹೆಂಡತಿ ಕಡೆ ನೆಂಟರು ನನ್ನನ್ನು ಯಾಕೋ ಒಂದು ರೀತಿ ನೋಡ್ತಿದಾರೆ ಅನಿಸಲು ಶುರುವಾಯಿತು. ಹೆಣ್ಣು ನಂಟರು ನನ್ನನ್ನು ನೋಡಿದ ಕೂಡಲೇ ಅವರವರೇ ಮುಖ ನೋಡಿಕೊಳ್ಳೋದೂ, ಏನೇ ನಿನ್ನ ಸೊಸೆ ಬಸಿರೇನೇ ನಿನ್ನ ಮಗಂಗೂ ಅವನು ಬಸಿರಾಗಿದಾನೆ ಅನಿಸುತ್ತೇನೇ ಅಂತಲೋ ಮೊಮ್ಮಗಳು ದೊಡ್ಡದಾಯ್ತಾ? ಅದರಪ್ಪಂಗೆ ತಾನೂ ದೊಡ್ಡದಾಗಿದ್ದೀನಿ ಅನ್ಸುತ್ತಾ.. ಈರೀತಿ ಅವರವರಲ್ಲೇ ಮಾತುಗಳು ನಡೆಯೋದೂ ಅದೂ ನನಗೆ ಕೇಳಿಸಲಿ ಅಂತಲೇ ಅವರು ಮಾತಾಡ್ತಿದಾರೆ ಅಂತ ನನಗೆ ಭಾವನೆ ಬರೋದೂ ಆಗಬೇಕೇ?

ಹೀಗಿರಬೇಕಾದರೆ ಮನೇಗೆ ಒಂದು ಹೊಸಾ ಸದಸ್ಯರು ಬರಬೇಕೇ? ನಂಟರೊಬ್ಬರ

ಸೊಸೆ ಮಗು ಹಡೆದಳು. ಮಗೂನ ನೋಡೋಕ್ಕೆ ಅಂತ ಆಸ್ಪತ್ರೆಗೆ ಹೋದೆವು – ಎಂದಿನಂತೆ ನನ್ನ ಹೆಂಡತಿ, ಅವಳ ಹಿಂದೆ ನಾನು ಬಸವನ ಹಿಂದಿನ ಬಾಲದ ಹಾಗೆ.

ಏನೇ ನಿನ್ನ ಸೊಸೆ ಬಸಿರೇನೇ ನಿನ್ನ ಮಗಂಗೂ ಅವನು ಬಸಿರಾಗಿದಾನೆ ಅನಿಸುತ್ತೇನೇ ಅನ್ನುವ ಪದಗಳು ನನ್ನ ತಲೆಯಲ್ಲಿ ಓಡೋಡಿ ಬರಬೇಕೇ? ಏನೇ ನಿನ್ನ ಸೊಸೆ ಬಸಿರೇನೇ ನಿನ್ನ ಮಗಂಗೂ ಅವನು ಬಸಿರಾಗಿದಾನೆ ಅನಿಸುತ್ತೇನೇ.. ಅಂತ ಅವತ್ತು ಕೇಳಿದ್ದ ಹೆಂಗಸು ಮಗೂನ ತೊಡೆ ಮೇಲೆ ಮಲಗಿಸಿಕೊಂಡು ಅಲ್ಲಿ ಕೂತಿದ್ದರು. ಅವರನ್ನ ನೋಡಿದ ಕೂಡಲೇ ನನ್ನ ನಾಲಿಗೆ ನನ್ನ ಕಂಟ್ರೋಲು ಮೀರಿ ಅದೇನೋ ಬಡಬಡಾಯಿಸಿ ಬಿಡಬೇಕೇ?

ಅದೇನು ಮಾತಾಡ್ತಾ ಇದೀನಿ ಅಂತ ನನಗೆ ತಿಳಿಯೋ ಅಷ್ಟರಲ್ಲಿ ಮಗೂನ ಎತ್ತಿಕೊಂಡಿದ್ದ ಹೆಂಗಸು ಗಡಿಬಿಡಿಯಿಂದ ಮಗೂನ ಅದ್ಯಾರಿಗೋ ಕೊಟ್ಟಿದ್ದೂ ಸೀರೆ ಸರಿಮಾಡ್ಕೋತಾ ನೆರಿಗೆ ಕೊಡವಿಕೊಂಡು ರೂಮಿನಿಂದ ಆಚೆ ಓಡಿದ್ದೂ , ಮಿಕ್ಕ ಹೆಣ್ಣುಗಳೂ ರೂಮಿನಿಂದ ಆಚೆ ಓಡಿದ್ದೂ ನನ್ನಾಕೆ ಗರ ಬಡಿಗೆ ಎರಡೂ ಒಮ್ಮೆಗೇ ಬಡಿದ ಹಾಗೆ ರೂಮಿನಿಂದ ನನ್ನನ್ನು ಆಚೆ ದಬ್ಬಿಕೊಂಡು ಓಡಿಬಂದಿದ್ದೂ ಅರೆಬರೆ ನೆನಪು ನನಗೆ.

ಎರಡೋ ನಾಲ್ಕೋ ಅದೆಷ್ಟೋ ವಾರ ಆದಮೇಲೆ ಉಂಡುಕೂತಿದ್ದೆವು. ಕೈಯಲ್ಲಿ ಬಾದಾಮಿ ಮಾವಿನ ಹಣ್ಣು ಇತ್ತು. ಚಾಕುವಿನಲ್ಲಿ ಅದರ ಸಿಪ್ಪೆ ತೆಗೆಯುತ್ತಿದ್ದೆ.

ಈಗ ಹೇಗಿದೆ ಅಂದಳು ನನ್ನಾಕೆ.

ಯಾಕೆ ನನಗೇನಾಗಿದೆ? ಅಂದೆ.

ಆಗ ಗೊತ್ತಾಯಿತು. ಈ ನನ್ನ ರೋಗದ ವಿವರ. ಮಗೂನ ನೋಡೊಕ್ಕೆ ಹೋದವನು ಅಲ್ಲಿದ್ದ ಅದರ ಸೋದರತ್ತೇಗೆ ಮಗೂನ ಎತ್ತಿಕೊಂಡಿದೀರಲ್ಲಾ ಹೆರಿಗೆ ಅನುಭವ ಆಯ್ತಾ ನಿಮಗೆ ಅಂತ ಹತ್ತು ನಿಮಿಷ ದಡಬಡ ಮಾತಾಡಿದೆನಂತೆ. ಪಾಪ ಅವರು ಸರ್ಕಾರೀ ಸೇವೆಯಿಂದ ರಿಟೈರ್ ಆಗಿ ಎರಡು ತಿಂಗಳಾಗಿತ್ತಂತೆ ಮತ್ತು ಅವರು ಸ್ಪಿನ್‌ಸ್ಟರ್ ಅಂತೆ. ಗಡಿಬಿಡಿಯಿಂದ ಆಚೆ ಓಡಿಹೋದರಂತೆ.

ಅದೆಷ್ಟೋ ದಿವಸದ ನಂತರ ಸಿಕ್ಕಿದರಂತೆ. ಆದರೂ ಕೂಲಾಗಿ ಪಾಪ ನಿಮ್ಮೆಜಮಾನರಿಗೆ ನಾವು ಹಾಗೆ ಅಷ್ಟೊಂದು ಟೀಸ್ ಮಾಡಬಾರದಿತ್ತು.. ಅಂದರಂತೆ.

ಇದು ವಿಪರೀತಕ್ಕೆ ಇಟ್ಟುಕೊಳ್ತು, ಹೀಗೆ ಬಿಟ್ಟರೆ ಇಡೀ ಪ್ರಪಂಚ ನಮ್ಮ ವೈರಿಗಳಾಗಿ ಬಿಡುತ್ವೆಅಂತ ಅನಿಸಿತಂತೆ. ಆಮೇಲೆ ಡಾಕ್ಟರು ಬಂದರು, ನೋಡಿದರು ಮತ್ತು...

ಈಗ ನನಗೆ ಟ್ರಾಂಕಿಲೈಸರು ಕೊಡ್ತಾ ಇದಾರಂತೆ..

ಅಪರೂಪಕ್ಕೆ ಒಮ್ಮೊಮ್ಮೆ ನನಗೆ ನಾನೇ ತಮಿಳು ನಾಡಿನ ಛೀಫ್ ಆದ ಹಾಗೆ, ಭಾರತದ ಛೀಫ್ ಜಸ್ಟೀಸ್ ಆದಹಾಗೆ, ಸಲ್ಮಾನ್ ಆದಂತೆ ಅನಿಸಿಬಿಡುತ್ತೆ.

ಹಳೇದಕ್ಕಿಂತಲೂ ಇದು ವಾಸಿ ಅಂತ ವೈದ್ಯರು ಹೇಳಿದ್ದಾರೆ!

*

# ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

**- ದಂನಳಿ**

- ನನಗೆ ನನ್ನ ಹೊಸ ಮೊಬೈಲ್ ಇಷ್ಟವಾಯಿತು. ನನ್ನ ಕಂಪ್ಯೂಟರ್ ಏನೂ ತೊಂದರೆ ಕೊಡುವುದಿಲ್ಲ. ನನ್ನ ಕ್ಯಾಲ್ಕುಲೇಟರ್ ಸಹ ಕರಾರುವಾಕ್ಕಾಗಿದೆ. ಆದರೆ ನನ್ನ ಮೆದುಳು ಎಲ್ಲಿ ಹೋಯಿತು ಎಂಬುದು ತಿಳಿಯುತ್ತಿಲ್ಲ.
- ದಿನಕ್ಕೆ 8 ತಾಸು ನಿದ್ದೆ ಮಾಡಬೇಕು ಎಂದಿರಾ? ಹಾಗಿದ್ದರೆ ರಾತ್ರಿ ಎಷ್ಟು ಹೊತ್ತು ನಿದ್ರಿಸಬೇಕು?
- ಹಿ ಈಸ್ ನಾಟ್ ಎ ಗಾಡ್ ಮ್ಯಾನ್ ಬಟ್ ಗಾಡ್‌ಡ್ಯಾಮನ್ಡ್ ಮ್ಯಾನ್.
- ದೇವರನ್ನು ಆಹಾರಕ್ಕೆ ಹೋಲಿಸದಿರಿ. ದೇವರಿಲ್ಲದೆ ಬದುಕಬಹುದು ಆದರೆ ಆಹಾರವಿಲ್ಲದೆ ಬದುಕಲು ಸಾಧ್ಯವಿಲ್ಲ.
- ಎಲ್ಲರ ಪ್ರಪ್ರಥಮ ಹಕ್ಕು ಎಂದರೆ ಕನಸು ಕಾಣುವ ಹಕ್ಕು.
- ನಾಗತಿಹಳ್ಳಿ ಚಂದ್ರಶೇಖರ ಕಂಬಾರ ಎಂದರೆ ಯಾರು?

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ಎವೆರಿ ರೈನ್ ಡ್ರಾಪ್ ಹ್ಯಾಸ್ ಎ ಜರ್ನಿ ಟಿ ಮೇಕ್.
- ಆಯ್ಕೆ ಮಾಡಲು ಅವಕಾಶವಿದ್ದಾಗ ನೀವು ಆಯ್ಕೆ ಮಾಡದಿದ್ದರೆ ಅದೇ ನಿಮ್ಮ ಆಯ್ಕೆ ಆಗಿರುತ್ತದೆ.
- ಸೆಲ್ ಫೋನ್ ಹಿಡಿದವರೆಲ್ಲ ಸೆಲ್ಫೀ ಕೋವಿದರು.
- ಯಶಸ್ಸನ್ನು ಗಳಿಸುವುದಕ್ಕಿಂತ ಅದನ್ನು ನಿರ್ವಹಿಸುವುದು ಕಷ್ಟ
- ಇಂಡಿಯಾ ಎ ಫನ್ನಿ ಕಂಟ್ರಿ ವಿಥೌಟ್ ಎ ಸೆನ್ಸ್ ಆಫ್ ಹ್ಯೂಮರ್ ಎಂದರೆ ಒಪ್ಪುವಿರಾ?
- ಪಾಪಿಗಳನ್ನು ದೇವರು ಕ್ಷಮಿಸದೇ ಇದ್ದರೆ ಬಹುಶಃ ಸ್ವರ್ಗ ಖಾಲಿಯಾಗಿಯೇ ಉಳಿಯುತ್ತಿತ್ತೇನೋ?
- ಭಿಕ್ಷುಕರಿಗೆ ಕನಸುಗಳಿಲ್ಲ, ಚಿಂತೆಗಳೂ ಇಲ್ಲ.
- ದಾರಿ ಸವೆದಷ್ಟೂ ದೂರ ಸರಿಯುವಂತೆ ಭಾಸವಾಗುವ ಊರಿನ ಹೆಸರು ಆದರ್ಶ.
- ನೀನು ಮಾಡುತ್ತಿರುವ ಕೆಲಸ ಎಷ್ಟು ಅಬ್ಬರ ಮಾಡುತ್ತಿದೆ ಎಂದರೆ ಆ ಅಬ್ಬರದಲ್ಲಿ ನೀನು ಹೇಳುತ್ತಿರುವುದು ನನಗೆ ಕೇಳಿಸುತ್ತಲೇ ಇಲ್ಲ.
- ಕಣ್ಣೀರಿಗೆ ಅಳಲು ಕಲಿಸಿದ ತಾರೆ ಮೀನಾಕುಮಾರಿ.

*

# ನಾನೇಕೆ ಎಮ್ಮೆ ಕಟ್ಟಲಿಲ್ಲ?

(ಶಾಸನದ ಶ್ರೀ ರಂಗರಾಯ ಅನುಭವ)

**- ನೀರಗುಂದ ಕೇಶವಮೂರ್ತಿರಾವ್**

**ಕೆ**ಲವು ತಿಂಗಳ ಹಿಂದೆ ನಮ್ಮೂರು ಬಾಗೂರಿಗೆ ಹೋಗಿದ್ದಾಗ ನರ್ಸಿಂಗ್ (ರಾಯರ) ಹೋಂನಲ್ಲಿ ನಡೆದ ಸಂಗತಿಗಳನ್ನೆಲ್ಲಾ ಅಪರಂಜಿ (ಜುಲೈ 2014) ಸಂಚಿಕೆಯಲ್ಲಿ ನಮ್ಮ ಓದುಗರೆಲ್ಲಾ ಓದಿ ಮರೆತಿರಬಹುದು.

ಸಿಂಗರಾಯರ 'ಗುಹೆ'ಯಲ್ಲಿ ಎರಡು ದಿವಸ ನಡೆದ ಕಿವಿಕೊರೆವ ಕಾರ್ಯಕ್ರಮದ ಕವಿಗೋಷ್ಠಿ ವಿಚಾರಗೋಷ್ಠಿಯಲ್ಲಿಯ ''ರಾಯರುಗಳ ಕೋಲಾಹಲ''ದ ಒಂದು ಪರಿಚಯ ಪ್ರಸಂಗದ ವರದಿ ಇಲ್ಲಿದೆ.

ಎರಡನೆ ದಿವಸದ ಕಾರ್ಯಕ್ರಮದಲ್ಲಿ ನಮ್ಮ ಊರಿನ ರಾಯರುಗಳು (ಈಗಾಗಲೇ ತಮಗೆ ಪರಿಚಯವಿರುವ ಸಾಹಿತಿ ಸಿಂಗರಾಯರು, ಬುರುಡೆ ಬಾಜೀರಾಯರು ಶಾಸನದ ಶ್ರೀ ರಂಗರಾಯರಲ್ಲದೆ ಪತ್ತೇದಾರಿ ಪರಮಶಿವ ಮತ್ತು ಕುಸ್ತಿ ರಂಗಣ್ಣ...) ಮರೆಯಲಾಗದ ಅನುಭವ ಕುರಿತು ಲೇಖನಗಳನ್ನು ಮಂಡಿಸಬೇಕಾಗಿತ್ತು.

ಮೊದಲಿಗರಾಗಿ ಶಾಸನದ ಶ್ರೀ ರಂಗರಾಯರು ''ನಾನೇಕೆ ಎಮ್ಮೆ ಕಟ್ಟಲಿಲ್ಲ?'' ಲೇಖನವನ್ನು ಮಂಡಿಸಿದರು. ರಾಯರ ಸಂಪೂರ್ಣ ಲೇಖನವನ್ನು ಅನಾಮತ್ತಾಗಿ ಕೊಡುತ್ತಿದ್ದೇನೆ –

ಶಾ. ಶ್ರೀ. ರಾಯರು ಮಾತನಾಡುತ್ತಾ ನನ್ನ ಲೇಖನದ ಶೀರ್ಷಿಕೆಯನ್ನು ಕೇಳಿದ ಕೂಡಲೇ ನಿಮಗೆಲ್ಲಾ ಅಚ್ಚರಿ ಎನಿಸಬಹುದು. 'ಅಲ್ಲಾ ಅಷ್ಟು ದೊಡ್ಮನೆ ಇಟ್ಕಂಡು, ದನದ ಕೊಟ್ಗೆ ಜಾಗ ಮಡೀಕ್ಕಂಡು, ಎಮ್ಮೆ ಯಾಕೆ ಕಟ್ಟಿಲ್ಲಾಂದ್ರೆ ಏನೋಪ್ಪ ಸಮಾಚಾರ ಅಂತ ಕೆಲವು ಸಭಿಕರ ಮನಸ್ನಲ್ಲಿ ಗೊಂದ್ಲ ಉಂಟಾಗ್ಬಹುದು. ಆದ್ರೆ ನಾನು ಕರಾವು ಕೊಡೋ ಎಮ್ಮೆ ಬಗ್ಗೆ ಹೇಳ್ತಾ ಇಲ್ಲ, ನಮ್ಮ ಬಾಗೂರಿನ ಎಷ್ಟೋ ಮಂದಿ ಬೆಂಗ್ಳೂರು ನಾಗೋ, ಮೈಸೂರ್ನಾಗೋ ಓದೋಕೆ ಹೋಗಿ ಬಿ.ಎ.ನ ಎಂ.ಎ.ನೋ ಕಲ್ತು ಬಂದಾವಲ್ಲಾ ಆ 'ಎಮ್ಮೆ' ಬಗ್ಗೆ ಹೇಳ್ತಾ ಇದ್ದೀನಿ.

ಶಾನೆ ದಿವಸದಿಂದ ಕೆಲವರು ಆಗಾಗ ಬಂದು ''ಯಾಕ್ಯಾರ, ನಾವು ಎಮ್ಮೆ ಕಟ್ಲಿಲ್ಲ. ಎಂತೆಂತೋರೊ ಕಟ್ಟುಬಿಟ್ಟು ಏನೇನೊ ಆಗವರೆ'' ಅಂತ ತಲೆ ತಿಂತಿದ್ರು. ಈ ಹೊತ್ತಿಗಾಗಲೇ ನನ್ನ ಹೆಸರು ಬಾಗೂರು ದಾಟಿ ಹೋಗಿದ್ದರಿಂದ ಏನನ್ನೂ ಕಟ್ಟುವ ಕೆಲಸಕ್ಕೆ ಹೋಗಲಿಲ್ಲ, ಆದರೆ ನನ್ನ ಮಿತ್ರ(ಒಂದು ಕಾಲದ ಶತೃವೂ ಹೌದು)ರಾದ ಈ ಸಭೆಯಲ್ಲೇ ತಮ್ಮ ಬೋಳು ತಲೆಯನ್ನು ತಗ್ಗಿಸಿ ಕುಳಿತಿರುವ ಬುರುಡೆ ಬಾಜೀರಾಯರಿಗೂ ನನಗೂ ಬಿಸಿ ಬಿಸಿ ಮಾತುಗಳು ಎದುರುಗಡೆಯ ಪಂಚಾಯ್ತಿಯ ಹಾಳು ಕಟ್ಟಡದ ಹತ್ತಿರ ಕುಳಿತಾಗ ನಡೆದದ್ದುಂಟು. ಆ ಸಂದರ್ಭ ಮರೆಯುವಂತಿಲ್ಲ.

ಆಗ ತಾನೆ ನನ್ನ ಮಾಸ್ಟರ್ ಪೀಸ್ ಲೇಖನವಾದ ''ಪಂಪ ಕವಿಯ ಮೇಲೆ ಹೊಸ ಬೆಳಕು'' ಲೇಖನ ಪ್ರಕಟವಾಗಿತ್ತು. ನಾಡಿನ ಎಲ್ಲಾ ಮೂಲೆಗಳಿಂದ ಬಂದ ಮುಕ್ತ ಮೆಚ್ಚುಗೆ ಪತ್ರಗಳು ಮುಖ್ಯವಾಗಿ ಮೈಸೂರಿನ ಕೊಟ್ರ ಬಸವಯ್ಯನವರು ಬರೆದ ''ಪಂಪನ ಮೇಲೆ ಹೊಸ ಬೆಳಕು ತೂರಿದ ರಂಗರಾಯನಿಗೆ'' ಎಂಬ ಪತ್ರವನ್ನು ಓದಿದ ಬಾಜೀರಾಯರ ಬುರುಡೆ ಬಿಸಿ ಮಾಡಿತ್ತು. ಆಗ ಅವರಂದದ್ದು ''ಲೇ. ಶ್ರೀ ರಂಗ ಸುಮ್ನೆ ಶಾಸನ ಹಾಸನಾಂತ ಕಲ್ಲು ಮಣ್ಣು ಕೆದಕಿ ಏನೇನೊ ಬರೀತಿದಿಯಾ ಇದಕ್ಕಿಂತ ಯಾವುದಾದರೂ ಯೂನಿವರ್ಸಿಟಿಗೆ ಹೋಗಿ 'ಎಮ್ಮೆ' ಕಟ್ಟಿ ಪಾಸ್ ಮಾಡ್ಕಂಡ್ಬಂದ್ರೆ ಸಾರ್ತಕ'' ಅಂದಿದ್ರು. ಅಲ್ಲದೆ ''ನೋಡು ನಾನು ನಿನ್ನಂಗೆ ನನ್ನ ಬುರುಡೆನೆಲ್ಲಾ ಬಿಚ್ಚಿಟ್ಟಿದ್ದರೆ (ಬರೆದು ಪ್ರಕಟಿಸಿದ್ದರೆ) ನಿನಗಿಂತ ಪ್ರಸಿದ್ದನಾಗುತ್ತಿದೆ. ನಂದು ಮಾತಂದ್ರೆ ಮಾತು. ಹೀಗಂತಾನೇಂತನ್ಬೇಡ. ನಾನು 'ಎಮ್ಮೆ' ಕಟ್ಟಿ ಪಾಸಾಗುವರ್ಗೂ ಏನೂ ಬರೆಯೊಲ್ಲ'' ಅಂದಿದ್ದರು. ಆಮೇಲೇನಾಯ್ತು ಗೊತ್ತಿಲ್ಲ. ನನ್ನ ಅವರ ಸಂಪರ್ಕ ನಿಂತಿತ್ತು. ಇದಾದ್ಮೇಲೆ ಬಾಗೂರಿನ ಬಾನುಲಿ ಕೇಂದ್ರದಿಂದ ನನ್ನ ಸಂದರ್ಶನ ಆಗಾಗ್ಗೆ ಪತ್ರಿಕೆಗಳಲ್ಲಿ ಕನ್ನಡ ಲಿಪಿ ಸುಧಾರಣೆ ಬಗ್ಗೆ ವಾಚಕರ ವಾಣಿಯಲ್ಲಿ ವಾದ-ವಿವಾದಗಳ ಪತ್ರ ವ್ಯವಹಾರ ನಡೆಯುತ್ತಿತ್ತು. ಆಗ ನಾನು ನನ್ನದೇ ಆದ ''ಲಿಪಿ ಸುಧಾರಣೆ'' ಸೂತ್ರ ಕುರಿತ ಲೇಖನವನ್ನು ಪ್ರಕಟಿಸಿದ್ದೆ.

ಬಾಗೂರಿನ ಜನತೆ ನನ್ನೆಲ್ಲಾ ಕೆಲಸಗಳನ್ನು ಗಮನಿಸಿ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಸಹ ಆಯೋಜಿಸಿತ್ತು. ಆ ಸಂದರ್ಭದಲ್ಲೂ ಸಹ ಕೆಲವರು ಸಾರ್, ''ನೀವು ಎಮ್ಮೆ ಕಟ್ಟಿ, ಒಂದು ಡಾಕ್ಟರೇಟ್ ಪಡೆದಿದ್ರೆ ಇನ್ನೂ ವೈನಾಗ್ತಿದ್ರಿ'' ಎಂದು ತಲೆತಿಂದದ್ದೂ ಉಂಟು.

ಕೊನೆಯದಾಗಿ ''ನಾನೇಕೆ ಎಮ್ಮೆ ಕಟ್ಟಲಿಲ್ಲ?'' ಎಂಬುದಕ್ಕೆ ಕಾರಣ ಹೇಳುತ್ತೇನೆ. ಕೇಳಿ ನನಗೆ ಮೊದಲಿನಿಂದಲೂ ಓದುವ ಹುಚ್ಚು ಹವ್ಯಾಸ. ''ಮಾಡಿದ್ದುಣ್ಣೋ ಮಹಾರಾಯನಿಂದ ಹಿಡಿದು, ಬರೆದದ್ದೋದೋ ಭೀಮರಾಯನವರೆಗಿನ'' ಪುಸ್ತಕಗಳನ್ನೆಲ್ಲಾ ಓದುತ್ತಿದ್ದೆ. ಆಗಾಗ ತೋಚಿದ್ದು ಗೀಚುವ ಚಪಲ. ಎಲ್ಲೋ ಓದಿದ್ದೆ - ಒಮ್ಮೆ ''ಸಾಹಿತ್ಯದ ಹುಚ್ಚು ಹತ್ತಿ ಬಿಟ್ಟರೆ ಏನಾದರೂ ಗೀಚುವ ತನಕ ಸಮಾಧಾನವಾಗುವುದಿಲ್ಲ.'' ಆಮೇಲೆ ಅಚ್ಚಿನ ಚರ್ಚೆಗೆ ಸಿಕ್ಕು ನನ್ನ ಲೇಖನಗಳು ಪತ್ರಿಕೆಗಳಲ್ಲಿ ಪ್ರಕಟವಾಗುತ್ತಾ ಹೋದಾಗ ನನ್ನಲ್ಲೆ ನಾನು ''ಎನಗಾರು ಸಮನಿಹರು'' ಎಂದು ಬೀಗ ತೊಡಗಿದೆ. ಹೀಗಾಗಿ ನಾನು ಎಮ್ಮೆ ಕಟ್ಟುವ, ಕರೆಯುವ ಕಾಯಕಕ್ಕೆ ತಿಲಾಂಜಲಿಯನಿತ್ತೆ.

ಮುಂದೆ ಕಾಲ ಉರುಳುತ್ತಿರಲು ಒಂದು ದಿನ ಮುಂಜಾನೆಯಲ್ಲಿ ಅಂಚೆಯಿಂದ ಬಂದ ಪತ್ರದ ಸಂಗ್ತಿ ಹೀಗಿತ್ತು.

ಮಾನ್ಯರೇ,

ನಾನು ಸಂಶೋಧನಾ ಕಾರ್ಯದಲ್ಲಿ ತೊಡಗಿದ್ದೇನೆ... ಬದುಕು ಬರಹ ಎಂಬ ಸಂಪಾದಿತ ಗ್ರಂಥವನ್ನು ಕಳುಹಿಸಿ ಮತ್ತು ನಿಮ್ಮ ಲೇಖನಗಳನ್ನು ಕಳಿಸಿಕೊಡಿ. ಅಂಚೆ ಖರ್ಚನ್ನು ತಮಗೆ ಕಳುಹಿಸುತ್ತೇನೆ..

ಪ್ರಾಧ್ಯಾಪಕರು

ಇನ್ನೊಮ್ಮೆ ಇಂತಹುದೇ ಪ್ರಸಂಗ, ಒಂದು ದಿನ ಮಟ ಮಟ ಮಧ್ಯಾಹ್ನ ಬೇಸಿಗೆಯ ಬಿಸಿಲಿಗೆ ನನ್ನ ಡಿಫಿಕಲ್ಟ್ ಛೇರ್‌ನಲ್ಲಿ ವರಾಂಡದಲ್ಲಿ ಕುಳಿತಿದ್ದಾಗ ತರುಣನೊಬ್ಬನ ಆಗಮನ. ಉಭಯ ಕುಶಲೋಪರಿಗಳ ನಂತರ ಆತ ''ಸಾರ್, ನಾನು... ವಿಶ್ವ ವಿದ್ಯಾನಿಲಯದ ಎಂ.ಎ. (ಎಮ್ಮೆ) ಕಟ್ಟಿದ್ದೇನೆ. ಫಲಿತಾಂಶ ಬಂದ ನಂತರ... ರವರನ್ನು ಕುರಿತು ಪಿ.ಎಚ್.ಡಿ. ಮಾಡಬೇಕೆಂದಿದ್ದೇನೆ. ಅದಕ್ಕಾಗಿ ನೀವು... ಪತ್ರಿಕೆಯಲ್ಲಿ ಅವರ ಕುರಿತ ಲೇಖನವನ್ನು ಬರೆದಿದ್ದೀರಿ. ಅದರ ಪ್ರತಿಯೊಂದನ್ನು ಕೊಟ್ಟರೆ, ನಕಲು ಮಾಡಿ ಹಿಂದಿರುಗಿಸುತ್ತೇನೆ. ತಮ್ಮಿಂದ ತುಂಬಾ ಉಪಕಾರವಾಗುತ್ತದೆ'' ಎಂದ. ಆಗ ನಾನು ಅದೇನು ಅಂತಹ ಮಹತ್ವದ ಲೇಖನವಲ್ಲ ಅಂದೆ. ಅದಕ್ಕೆ ಆತ ''ಹಾಗೇನಿಲ್ಲ ಸಾರ್, .......ರವರನ್ನು ಕುರಿತ ಮಾಹಿತಿಯನ್ನು ಎಲ್ಲಾ ಮೂಲಗಳಿಂದಲೇ ಸಂಗ್ರಹಿಸುತ್ತಿದ್ದೇನೆ. ಹಾಗಾಗಿ ತಮ್ಮ ಲೇಖನವು ಮಹತ್ವದ್ದಾಗಿರುತ್ತದೆ'' ಎಂದ. ಅವನ ಬೇಡಿಕೆಯನ್ನು ಈಡೇರಿಸಿ ಕಳಿಸಿದೆ. ಮರೆತೇಬಿಟ್ಟ ಎಷ್ಟೋ ವರ್ಷದ ನಂತರ 'ಕೊರಿಯರ್' ಮುಖಾಂತರ ನನ್ನ ಹೆಸರಿಗೆ ಪುಸ್ತಕದ ಪ್ರತಿಯೊಂದು ಬಂತು. ಕುತೂಹಲದಿಂದ ತೆರೆದು ನೋಡಿದೆ. ''............'' ರವರನ್ನು ಕುರಿತು ರಚಿಸಿದೆ ಪಿ.ಎಚ್.ಡಿ. ಪ್ರಬಂಧ! ಲೇಖಕರು ಈ ಹಿಂದೆ ನನ್ನನ್ನು ಭೇಟಿ ಮಾಡಿದ್ದು ನೆನಪಿಗೆ ಬಂದು ಪುಸ್ತಕವನ್ನು ತಿರುವಿ ಹಾಕಿದೆ. ಕೊನೆಯಲ್ಲಿ ''ಆಕರ ಗ್ರಂಥ - ಲೇಖನಗಳ'' ಪಟ್ಟಿಯಲ್ಲಿ ನನ್ನ ಅಂದರೆ ''ಶಾಸನದ ಶ್ರೀ ರಂಗರಾಯ'' - ಲೇಖನ... ಎಂದು ಮುದ್ರಿತವಾಗಿತ್ತು!

ಮನಸ್ಸಿನಲ್ಲೇ ನಿಶ್ಚಯಿಸಿದೆ ''ನಾನೇಕೆ ಎಮ್ಮೆ ಕಟ್ಟಬೇಕು'' ಇನ್ನು ಮುಂದೆ ಈ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ನೇಮಿಚಂದ್ರನ 'ಲೀಲಾವತಿ' ಪ್ರಬಂಧದಲ್ಲಿ ''ಕಟ್ಟುಗೆ ಕಟ್ಟದಿರ್ಕೆ ಕಡಲಂ ಕಪಿ ಸಂತತಿ ............ ಕವಿಗಳ್ ಕೃತಿ ಬಂಧದೊಳಿ ಕಟ್ಟಿದರ್ ಮೆಟ್ಟಿದರ್'' ಎಂಬಂತೆ ನನಗೆ ನಾನೇ

''ಕಟ್ಟುಗೆ ಕಟ್ಟದಿರ್ಕೆ ಎಮ್ಮೆಯನ್

ಶಾಸನದ ಶ್ರೀರಂಗರಾಯನ್

ಬರೆದನ್ ಕೊರೆದನ್ ಪತ್ರಿಕೆಯೊಳ್

ಪ್ರಕಟಿಸಿ ಪ್ರಸಿದ್ಧಿ ಗೈದನ್'' ಎಂದು ಇಂದಿಗೂ ಬೀಗುತ್ತಿದ್ದೇನೆ.

ಜೈ ಕನ್ನಡ ಮಾತೆ!

- ಶ್ರೀ ರಂಗರಾಯ ಶಾಸನದ ಸಭೆ ಶಿಳ್ಳೆ - ಚಪ್ಪಾಳೆಯೊಂದಿಗೆ ಮುಕ್ತಾಯವಾಯ್ತು.

*

**ಎಚ್ಚರಿಕೆ**

ವರ್ಷದ ಮೊದಲ ಟೆಸ್ಟ್ ಮುಗಿದ ಮೇಲೆ ಒಂದು ದಿನ ಸ್ಕೂಲ್ ಮೇಷ್ಟ್ರು ಸಿದ್ರಾಮು ಮನೆಗೆ ಬಂದು ನಿಮಗೆ ನಿಮ್ಮ ಮಗ ಚೆನ್ನಾಗಿ ಓದಬೇಕು, ಫಸ್ಟ್ ಬರಬೇಕು, ಎಲ್ಲಾ ವಿಷಯಗಳಲ್ಲೂ ಮುಂದಿರಬೇಕು ಅಂತ ಆಸೆ ಏನಾದರೂ ಇದ್ದರೆ ನೀವು ಅವನ ಹೋಂ ವರ್ಕ್ ಮಾಡಿಕೊಡೋದನ್ನು ಈಗಿಂದೀಗಲೇ ನಿಲ್ಲಿಸಿ ಅಂದರು

# Advertisement

# Advertisement

# ಕೆಂಪು ಕೋಟು

**- ನುಗ್ಗೆಹಳ್ಳಿ ಪಂಕಜ**

ಬ್ರಿಟೀಷ್ ಯೋಧರಲ್ಲಿ ಒಂದು ಸಂಪ್ರದಾಯವಿದೆ. ರಣರಂಗಕ್ಕೆ ಇಳಿದಾಗ ಅವರ ಉನ್ನತ ಸೈನ್ಯಾಧಿಕಾರಿಗಳು ಕಟ್ಟುನಿಟ್ಟಾಗಿ ಕೆಂಪುಕೋಟನ್ನು ಧರಿಸುತ್ತಾರೆ. ಅದೇಕೆ?

ಹಿಂದೆ ಬ್ರಿಟೀಷರಿಗೂ ಫ್ರೆಂಚರಿಗೂ ಆಗಾಗ ಕದನಗಳಾಗುತ್ತಿದ್ದವು. ಒಮ್ಮೆ ಒಬ್ಬ ಉನ್ನತ ಬ್ರಿಟೀಷ್ ಅಧಿಕಾರಿ ಶತ್ರುಗಳ ಕೈಗೆ ಸಿಕ್ಕಿಬಿದ್ದನು. ಅವನನ್ನು ಸೆರೆಹಿಡಿದ ಫ್ರೆಂಚ್ ಅಧಿಕಾರಿ ನೇರವಾಗಿ ಪ್ರಶ್ನೆ ಹಾಕಿದನಂತೆ ''ನಮ್ಮನ್ನೆಲ್ಲಾ ಬಹಳ ದಿನಗಳಿಂದ ಒಂದು ಕುತೂಹಲ ಕಾಡುತ್ತಿದೆ; ಅದೇನೆಂದರೆ, ನೀವು ಸೈನ್ಯನಾಯಕರು ಅದೇನು ನಿರ್ಧಿಷ್ಟವಾಗಿ ಹೀಗೆ ಕೆಂಪುಕೋಟನ್ನೇ ಧರಿಸುತ್ತೀರಿ, ನಿಮ್ಮ ಸಮವಸ್ತ್ರದೊಂದಿಗೆ?''

ಆ ಸೈನ್ಯಾಧಿಕಾರಿ ನಕ್ಕು ತಿಳಿಸಿದನಂತೆ ''ಕಾರಣ ಇಷ್ಟೆ... ನಾವು ಅಧಿಕಾರಿಗಳು ಯುದ್ಧದಲ್ಲಿ ಗಾಯಗೊಂಡರೆ, ನಮ್ಮ ದೇಹದಿಂದ ಸೋರುವ ರಕ್ತ ನಮ್ಮ ಸೈನಿಕರಿಗೆ ಗೊತ್ತಾಗಬಾರದು; ಗೊತ್ತಾದರೆ ಅವರೆಲ್ಲ ಭಯಗೊಂಡು ರಣರಂಗದಿಂದ ಓಡಿಹೋಗುವ ಸಂಭವ, ನಾಯಕ ಯಾವತ್ತೂ ಅಜೇಯನಂತೆ ಇದ್ದರೆ ತಾನೆ ಅವನನ್ನು ಹಿಂಬಾಲಿಸಿ ಬರುವ ಯೋಧರಿಗೂ ಹುರುಪು-ಆತ್ಮ ಸ್ಥೈರ್ಯ, ಕೊನೆಗೆ ವಿಜಯ?''

''ಶಾಭಾಸ್! ಎಂಥಹ ಅದ್ಭುತ ದುರಾಲೋಚನೆ!'' ಅಲ್ಲಿ ನೆರೆದಿದ್ದ ಸೈನ್ಯಾಧಿಕಾರಿಗಳೆಲ್ಲ ತಲೆದೂಗಿದರು. ''ಈ ಬ್ರಿಟೀಷರ ಚುರುಕು ಬುದ್ದಿಯೇ ಬುದ್ದಿ! ನಿಜಕ್ಕೂ ಕುಶಾಗ್ರಮತಿಗಳು! ನಾವೂ ಅದನ್ನ ಅನುಸರಿಸಬೇಕು.''

ಅಂದಿನಿಂದ ಫ್ರೆಂಚ್ ಸೈನ್ಯಾಧಿಕಾರಿಗಳೂ ಸಹ ತಮ್ಮ ಸಮವಸ್ತ್ರದಲ್ಲಿ ಒಂದು ಬದಲಾವಣೆಯನ್ನು ರೂಢಿಗೆ ತಂದರು. ಅಂದಿನಿಂದ ಅವರುಗಳು 'ಬ್ರೌನ್ ಟ್ರೌಷರ್ಸ್' ಅನ್ನು ಧರಿಸಲಾರಂಭಿಸಿದರು.

ಈಗಲೀಗ ದೇಶದ ಆರ್ಥಿಕ ಬಿಕ್ಕಟ್ಟಿನಿಂದಾಗಿ ಪದ್ಧತಿಯಲ್ಲಿ ಸ್ವಲ್ಪ ಸ್ವಲ್ಪವಾಗಿ ಸಡಿಲ ಉಂಟಾಗುತ್ತಿರುವಂತಿದೆ; ಆದರೂ ಉತ್ಕೃಷ್ಟ ಸಮಾರಂಭಗಳಲ್ಲಿ ಈ 'ರೆಡ್ ಕೋಟ್'ಗೆ ಮಹತ್ವ. ಮೊನ್ನೆ ಅದ್ದೂರಿಯಿಂದ ವಿವಾಹವಾದ ರಾಜಕುಮಾರ ವಿಲಿಯಮ್ಸ್ ತನ್ನ ಸಮವಸ್ತ್ರದೊಂದಿಗೆ ಈ ಪ್ರಸಿದ್ಧ ಕೆಂಪು ಕೋಟ್ ಅನ್ನೂ ಧರಿಸಿದ್ದ.

ಈಗಲೂ ಎಷ್ಟೋ ಕಡೆ ಬ್ರಿಟೀಷ್ ಪಡೆಗಳನ್ನು 'ರೆಡ್ ಕೋಟ್ಸ್' ಎಂತಲೇ ಸಂಬೋಧಿಸುವುದುಂಟು.

*

# ಕೊರವಂಜಿ ಪದಬಂಧ – 18

- ವಿದ್ಯಾ ವಿ. ಹಾಲಭಾವಿ




**ಎಡದಿಂದ ಬಲಕ್ಕೆ**

2. ಇದು ಮನುಷ್ಯ ಶಕ್ತಿಗೆ ಮೀರಿದುದು (5)
4. ಅಕ್ಕ ಕಲಿಸಿದ ಗಣಿತ ಸಮಸ್ಯೆ (2)
5. ರಾಜನ ಹೆಂಡತಿ ಹಾವರಾಣಿ ಹಿಡಿದಿದ್ದಾಳಲ್ಲ? (2)
6. ನಿಯಮಿತವಾಗಿ ಕಾಣಿಸುವ ಸ್ತ್ರೀ (3)
7. ಬಾಯಿಯ ಕೊನೆ (4)
8. ಏನೂ ಬೆಳೆಯದ ಬಂಜರು ನೆಲವಿದು (5)
11. ಪದ ಹೇಳಿ ಅಧಿಕಾರ ಕಳೆದುಕೊಳ್ಳುವಿಕೆ (4)
12. ಅಕ್ಕನ ಗಂಡನಿಂದ ಮೂಡಿರುವ ಕಲ್ಪನೆ (3)
13. ಪರವಶಗೊಂಡಾಗ ಕಾಣಿಸಿದ ಹೆಣ (2)
14. ಮುನಿ ಇಲ್ಲಿದ್ದಾನೆ (2)
15. ಹಳೆಯದನ್ನು ಪುನಃ ಹೊಸದು ಮಾಡುವಿಕೆ (5)

**ಮೇಲಿಂದ ಕೆಳಕ್ಕೆ**

1. ಅಂತ್ಯ ಹೀಗೆ ಬಂದಿದೆಯಲ್ಲಾ? (5)
2. ಲೆಕ್ಕ ಕಲಿಸಿದ ಹಿರಿಯ ಸಹೋದರಿ (2)
3. ಷರಾ ಬರೆದ ಗಂಡಸು ತೊಟ್ಟ ಉಡುಪು (3)
4. ಬೋಳು ಶಿರಾ ಉಲ್ಟಾ ಆಗಿದೆಯಲ್ಲಾ? (4)
7. ಕರದಲ್ಲಿ ಹಿಡಿದಿರುವ ಕಚ್ಚಾಪ್ರತಿ (5)
9. ಕಡಿಮೆ ಮಾತನಾಡುವವನು (4)
10. ಮಧುರವಾದ ಸ್ಮರಣೆ (5)
11. ವನದ ಬಳಿ ಬೀಸಿದ ಗಾಳಿ (3)
14. ಸಾಲ ಅಥವಾ ಹಂಗು ಎನ್ನಿ (2)

***(ಉತ್ತರಕ್ಕೆ 33ನೇ ಪುಟ ನೋಡಿ)***

# ವಜ್ರದ ಮೂಲ

**- ಡಾ. ಶ್ಯಾಮಲಾ ರವಿಶಂಕರ್**

**ನ**ನ್ನ ಅಚ್ಚುಮೆಚ್ಚಿನ ರಂಗತ್ತೆ ಬಗ್ಗೆ ನಿಮಗೆ ಹಿಂದೆ ಹೇಳಿದ್ದೆ. ಆಕೆ ಬಹಳ ಸ್ಮಾರ್ಟ್ ಹಾಗೂ ಉತ್ಸಾಹದ ಚಿಲುಮೆ. ಅವರು ಗೊಣಗಿದ್ದು ಎಂದೂ ಇಲ್ಲ. ನಾವೇನಾದ್ರೂ ಗೊಣ ಗೊಣಗಿದ್ರೂ ''ಅಯ್ಯೋ ಬಿಟ್ಹಾಕೇ ಅವೆಲ್ಲಾ, ಸುಮ್ನೆ ತಲೆ ಕೆಡಿಸ್ಕೋಬೇಡ'' ಅನ್ನೋ ಬುದ್ಧಿವಾದ ಯಾವಾಗ್ಲೂ ರೆಡಿಯಿರತ್ತೆ ಅವರಲ್ಲಿ. ಹಾಗೇ ಅದನ್ನು ಅವರ ನಡವಳಿಕೆಯೂ ಪ್ರತಿಬಿಂಬಿಸುತ್ತೆ.

ಇಂಥಾ ರಂಗತ್ತೆ ಮೊನ್ನೆ ಫೋನ್ ಮಾಡಿ 'ಆದರೆ ಸ್ವಲ್ಪ ಈ ಕಡೆ ಬರ್ತೀಯಾ' ಅಂದಾಗ ನನಗೆ ಏನೋ ಆತಂಕವಾಗಿ 'ಏನು ಸಮಾಚಾರಾ? ಹುಷಾರಾಗಿದ್ದೀರಿ ತಾನೆ?' ಅಂದೆ. ನಂಗೊತ್ತು ಮಾವ ಹಳ್ಳಿ ಕಡೆ ಎದ್ರೆ ಕೂತ್ರೆ ಎದ್ದು ಬಿಡ್ತಾ ಇರ್ತಾರೆ. ಮಗ-ಸೊಸೆ-ಮೊಮ್ಮಗ ಅವರವರ ಕ್ಷೇತ್ರಗಳಿಗೆ ರವಾನೆ ಈ ಹೊತ್ತಿನಲ್ಲಿ ಒಬ್ಬರೇ ಇರೋ ರಂಗತ್ತೆಗೆ ಏನು ಆಗಿರಬಹುದು ಅಂತ ಯೋಚನೆಕ್ಕಿಟ್ಟುಕೊಂಡಿತು. ನನ್ನ ಮೌನದಿಂದ ಆಕೆಗೆ ನಗು ಬಂತು 'ಏನೂ ಆಗಿಲ್ಲ ನನಗೆ. ಯಥಾ ಪ್ರಕಾರ ಗಿಟುಕಿನ್ಹಂಗೇ ಇದ್ದೀನಿ ಆದರೆ ಬೇಗ ಬಾ, ನನ್ಗೆ ನಿನ್ನ ಸಹಾಯ ಬೇಕು' ಅಂದ್ರು.

ತಕ್ಷಣ ಆಟೋ ಹಿಡಿದು ಜಿಗಿದೇ ಬಿಟ್ಟೆ ಅವರ ಹೊಸ್ತಿಲಿಗೆ ''ಅಯ್ಯೋ, ಬಂದೇ ಬಿಟ್ಯಾ, ಗಾಬರಿ ಆಗ್ಬೇಡ ಅಂತಂದ್ರೂನೂ ಅದೇನು, ಅಷ್ಟೊಂದು ಟೆನ್ಸ್ ಆಗ್ಬಿಟ್ಟಿದ್ದೀಯಾ?'' ಅಂದು ನಿಂಬೆ ಪಾನಕ ತಂದು ಕೈಗಿಟ್ರು. ''ಕೂಲಾಗೇ, ಮಾರಾಯ್ತಿ ಈಗ್ಲಾದ್ರೂ ಗೊತ್ತಾಯ್ತಲ್ಲ, ನಾನು ಓ.ಕೆ.'' ಅಂತ ನಕ್ಕರು. ಪಾನಕ ಒಳಕ್ಕೆ ಸುರ್ಕೊಂಡ್ಮೇಲೆ ಹೊಟ್ಟೆ ಜೊತೆ ತಲೇನೂ ತಣ್ಣಗಾಯ್ತು. ನಗ್‌ನಗ್ತಾ ಮಾತಾಡಿದೆವು. ಎಲ್ಲಾ ಲೋಕಾಭಿರಾಮ ''ಏತಕ್ಕಾಗಿ ನನಗೆ ತಮ್ಮ ಇತ್ಸಾದರದ ಆಹ್ವಾನ ಏಂದು? ಒಬ್ರೇ ಇರೋಕೆ ಭಯ ಆಯ್ತಾ? ಅಂದ್ರೆ ನಿಮಗೂ ವಯಸ್ಸಾಗ್ತಾ ಬಂತು ಅಂತ ಖಾತರಿ'' ಅಂದೆ.

''ಖಾತ್ರಿನೋ, ಭೀತ್ರಿನೋ ನಂಗೆ ವಯಸ್ಸಾಗಿಲ್ಲ ಅಂತ ಯಾರಂದ್ರು'' ಅದಿರಲಿ, ನಿನ್ನೆ ರಾತ್ರಿ ಒಂದು ಕ್ಷಣಾನೂ ನಿದ್ದೆ ಬರ್ಲಿಲ್ಲ. ಯಾಕೆ ಗೊತ್ತಾ... ಯಾಕಪ್ಪಾ ಅಂದ್ರೆ ನನಗೆ ಒಂದು ವಜ್ರದ ಹರಳು ಸಿಕ್ತು. ಅದೂ ನನ್ನ ಗೋದ್ರೆಜ್ ಅಲ್ಮಿರಾ ಮುಂದೆ ಬಿದ್ದಿತ್ತು. ಅದರಿಂದ.

''ಅಯ್ಯೋ, ವಜ್ರ ಸಿಕ್ಕರೆ ನಿದ್ದೆ ಬರೋಲ್ವಾ? ನಂಗೊತ್ತಿಲ್ಲಪ್ಪಾ ನಂಗ್ಯಾವತ್ತೂ ವಜ್ರ ಸಿಕ್ಕಿಲ್ಲ! ಸಿಕ್ಕಿದ್ದಿದ್ರೆ... ಅದೇನು ಮಹಾ... ಏನೋ ಗೊತ್ತಿಲ್ಲ ಅತ್ತೆ. ನೀವು ಇನ್ನೊಂದು ಉಂಗುರ ಮಾಡಿಸ್ಕೊಂಡ್ಬಿಡಿ. ಆಗ ವತ್ತಂಗುಳಿಗೆ ಉಂಗುರವಂ... ಧರಿಸಿ...''

''ಏಯ್, ತರಲೆ ಬೇಡ. ಬೀ ಸೀರಿಯಸ್ ಮೊನ್ನೆ ತಾನೆ ನಿಮ್ಮ ಮಾವನ ಜೊತೇಲಿ ಹೋಗಿ ಒಡವೆಗಳನ್ನೆಲ್ಲಾ ಬ್ಯಾಂಕ್ ಲಾಕರ್ ಒಳಗೆ ಇಟ್ಟು ಬಂದೆ. ಇದು ಎಲ್ಲಿಂದ ಬಂತಪ್ಪಾ

ಅಂತ...'' ''ಬ್ಯಾಂಕಿಗೆ ಹೋಗೋ ಅವಸರದಲ್ಲಿ ಯಾವುದೋ ಒಂದು ಒಡವೆಯಿಂದ ಬಿದ್ದಿರಬಹುದು. ಅದರಲ್ಲಿ ಹೆಚ್ಚುಗಾರಿಕೆ ಏನೂ?'' ಅಂದೆ. 'ಅದು ಮೊನ್ನೆ, ಆಮೇಲೆ ಗುಡಿಸಿ ಸಾರಿಸಿರೋ ಮನೇಲಿ, ನಿನ್ನೆ ಸಿಕ್ತು ವಜ್ರ – ಆಸ್ ಎ ಲೂಸ್ ಐಟಮ್!'

ಈಗ ನನ್ನ ಮುಖದಲ್ಲೇ ಪ್ರಶ್ನಾರ್ಥಕ ಚಿಹ್ನೆ ತಿಲಕ ಪ್ರಾಯವಾಗಿದ್ದಿರಬೇಕು, ರಂಗತ್ತೇನೇ ಮುಂದುವರೆಸಿದರು. 'ಇಲ್ಲೇ ಒಂದು ಮೈಲೀನು ಇಲ್ಲ ನನ್ನ ಬ್ಯಾಂಕು. ನನ್ನ ಜೊತೆಗೆ ಬರ್ತೀಯಾ? ಒಂದ್ಸಲ ಎಲ್ಲಾ ಒಡವೆಗಳನ್ನೂ ಪರಿಶೀಲಿಸಿ ಬಿಡೋಣ. ಬಳೇದೋ, ನೆಕ್ಲೇಸ್‌ದೋ ಗೊತ್ತಾಗಿ ಹೋಗತ್ತೆ' ಅಂದ್ರು.

'ಎಲ್ಲಿದೆ, ಆ ವಜ್ರ ತೋರಿಸಿ' ಅಂದೆ.

ಅಚ್ಚುಕಟ್ಟಾಗಿ ಹೋಮಿಯೋ ಪತಿ ಸಕ್ಕರೆ ಗುಳಿಗೆ ಕಟ್ತಾರಲ್ಲಾ ಅಂಥಾ ಪುಟ್ಟ ಪೊಟ್ಟಣದಲ್ಲಿ ಭದ್ರವಾಗಿರಿಸಿ, ಅದಕ್ಕೆ ಸರಿ ಹೋಗುವ ಪುಟ್ಟ ಜಿಪ್‌ಲಾಕ್ ಕವರಿನಲ್ಲಿಟ್ಟು ಅದನ್ನ 1 ಗ್ರಾಂ ಕೇಸರಿ (ಖಾಲಿಯಾಗಿದ್ದ) ಪ್ಲಾಸ್ಟಿಕ್ ಡಬ್ಬದಲ್ಲಿಟ್ಟು, ಅದಕ್ಕೆ ಹೊಂದುವ ಪುಟ್ಟ ಬಟುವಾ ಅಂತಾರಲ್ಲ, ಚಿಲ್ಲರೆ ಇಡೋ ಪರ್ಸು, ಅದರಲ್ಲಿ ಅದನ್ನ ಅವರ ಹ್ಯಾಂಡ್‌ಬ್ಯಾಗ್‌ನ ಮಧ್ಯದ ಜಿಪ್‌ನಲ್ಲಿಂದ ತೆಗೆದು ತೋರಿಸಿದರು. ಅಬ್ಬಾ! ಏನು ಹೊಳಪು! ಒಂದೆರಡು ನಿಮಿಷ ತೆರೆದ ಬಾಯಿ, ಬಿಟ್ಟ ಕಣ್ಣುಗಳಿಂದ ನೋಡುತ್ತಿದ್ದ ನನಗೆ ಕಾಲ ಸರಿದದ್ದೇ ಗೊತ್ತಾಗಲಿಲ್ಲ!

''ಏನೇ, ಮೂರ್ಛೆ ಹೋದ್ಯಾ ಅಥವಾ ಸತ್ತೇ ಹೋದ್ಯಾ!'' ಅಂತ ನನ್ನನ್ನು ವಾಸ್ತವಕ್ಕೆ ಎಳೆ ತಂದರು ರಂಗತ್ತೆ.

ಚೇತರಿಸಿಕೊಂಡ ನಾನು 'ಈ ಪಾಮರಳಿಂದ ಈಗೇನು ಆಗಬೇಕಾಗಿದೆ' ಎಂದು ನಾಟಕೀಯವಾಗಿ....

ಜಸ್ಟ್ ಸ್ಟಾರ್ಟ್ ಟು ಮೈ ಬ್ಯಾಂಕ್ ಅಲ್ಲಿಗೆ ಹೋಗಿ ಎಲ್ಲಾ ಆಭರಣಗಳನ್ನು ಪರಿಶೀಲಿಸೋಣ. ಈ ವಜ್ರದ ಪುನಃ ಪ್ರತಿಷ್ಠಾಪನೆ ಕೂಡ ಮಾಡ್ಬಿಬಿಡೋಣ ಅಟ್ ದ ಅರ್ಲಿಯಸ್ಟ್ ಅಂದ್ರು. 'ಬ್ಯಾಂಕ್ ಲಾಕರ್ ಮುಂದೆ ಅಷ್ಟೊತ್ತು ಕೂತ್ಕೊಳ್ಳೋಕೆ ಆಗೊಲ್ಲಾ ಅವಸರಬೇಡ, ಮನೇಗೆ ಎಲ್ಲಾನೂ ತಂದು ನೋಡೋಣ ಆಮೇಲೆ ಮುಂದಿನ ಕೆಲಸ' ಅಂದೆ.

ಮನೇಗೆ ಅವನ್ನೆಲ್ಲಾ ತರೋದು ರಂಗತ್ತೆಗೆ ಇಷ್ಟವಿಲ್ಲಾಂತ ಕಂಡ್ರೂ ನನ್ನ ಸಲಹೆಗೆ ಒಪ್ಪಿದ್ರು. 'ಸರಿ, ಹಮ್ ದೋನೋ ದೋ ಲೇಡೀಸ್, ದುನಿಯಾ ದೂರ್ ಚಲೇ' ಅಂತ ಹಾಡಿದೆ ಚಪ್ಪಲಿ ಮೆಟ್ಕೊತಾ.

ಅಂತಾ ಟೆನ್ಶನ್‌ನಲ್ಲೂ ರಂಗತ್ತೆ ತಿದ್ದಿದ್ದು. 'ದುನಿದಾ ದೂರ್ ನಹಿ, ಬ್ಯಾಂಕ್ ಲಾಕರ್ ಕೀ ಓರ್ ಚಲೇ' ಅಂತ ದಟ್ ಈಸ್ ಹರ್ ಸ್ಪಿರಿಟ್?

ಸರಿ, ಬ್ಯಾಂಕ್‌ನಲ್ಲಿ ಯಥಾಪ್ರಕಾರ ಜನಮೇಜನ! ನನ್ನ ಐಡಿಯಾನೇ ಪಾಲಿಸಬೇಕಾಯ್ತು. ಆದಷ್ಟು ಬೇಗ ಇಟ್ಟಿದ್ದ ಎಲ್ಲಾ ಸಣ್ಣ–ದೊಡ್ಡ ಪೌಚಸ್–ಪರ್ಸ್ ಎಲ್ಲಾನೂ ಹೊತ್ತು ಮನೆಗೆ ಹೋದ್ವಿ. ರಂಗತ್ತೆ ಸ್ವಲ್ಪ ಸೀರಿಯಸ್ಸಾಗಿದ್ರು. ನಾನೂ ಏನೂ ಹೆಚ್ಚು ಹರಟ್ದೆ ಒಂದೊಂದಾಗಿ

ಎಲ್ಲಾ ಒಡವೆಗಳನ್ನು ಹಿಂದೆ-ಮುಂದೆ ಮೇಲೆ-ಕೆಳಗೆ ಎಲ್ಲಾ ದಿಕ್ಕುಗಳಿಗೂ ತಿರುಗಿಸಿ ನೋಡಿದ್ದೂ ನೋಡಿದ್ದೆ! ಲಿವಿಂಗ್ ನೋ ಸ್ಟೋನ್ ಅನ್-ಅಬ್‌ಸರ್ವ್ಡ್! ಬಳೆ ಆಯ್ತು, ನೆಕ್ಲೇಸ್ ಆಯ್ತು, ಬೇಸುರಿಗಳಾಯ್ತು, ಕ್ಲಾವರ್ ಥರದ ಓಲೆಗಳಾಯ್ತು, ಎಲ್ಲಾದರಲ್ಲೂ ಆಯಾ ವಜ್ರಗಳು ಯಥಾಸ್ಥಾನೇ ಪ್ರತಿಷ್ಠಾಪಿಸಿದ್ದವು! ಯಾವುದೊಂದು ಹರಳೂ ತನ್ನ ಸ್ಥಾನ ಬಿಟ್ಟು ಕೊಡದೆ ದೊಂಡಾಗಿ ಮಂಡಿಸಿದ್ದವು!

''ಇನ್ನೊಂದ್ಸಲಿ ನೋಡ್ಬಿಟ್ಟೇನಿ, ಆಮೇಲೂ ನನ್ನ ಕಣ್ಣಿಗೆ ಗೊತ್ತಾಗದೆ ಹೋದರೆ, ನೀನೂ ಇನ್ನೊಂದ್ಸಲ ನೋಡ್ಬಿಡು, ಆಯ್ತಾ?'' ಅಂದ್ರು. ನೋಡಿದ್ವಿ ಮತ್ತೂ ನೋಡಿದ್ವಿ ಎಲ್ಲೂ ಬೊಚ್ಚು ಬಾಯಿ ಹಾಗೆ ವಜ್ರ ಬಿದ್ದ ಸ್ಥಳ ಗೋಚರವಾಗಲಿಲ್ಲ! ಇದೆಲ್ಲಿಯ ತಲೆ ನೋವಪ್ಪಾ ಅಂದ್ಕೊಳ್ತಾ ''ಇನ್ನೂ ಏನಾದ್ರೂ ಬೇರೆ ಒಡವೆ ಇದ್ಯಾ ಗುರ್ತಿಸ್ಕೊಳ್ಳಿ - ಹೋಗ್ಲಿ, ನಿಮ್ಮ ಬೆಂಡೋಲೆ?''

''ಅಲ್ಲಿಂದ್ಲೇ ಶುರು ಮಾಡಿದ್ದು ನಾನು'' ಎಂದ್ರು ನಾನೂನು ನೋಡ್ದೆ. ಎಲ್ಲಾ ಹದಿನಾಲ್ಕು ಹರಳುಗಳೂ ಸ್ವಸ್ಥಾನಗಳಲ್ಲಿ ಹುದುಗಿ ರಾರಾಜಿಸುತ್ತಿದ್ದವು.

ಈಗ ಇನ್ನೇನೂ ತೋಚದ ಕಾರಣ ಎಲ್ಲಾ ಆಭರಣಗಳನ್ನೂ ಬ್ಯಾಂಕಿನಲ್ಲಿಟ್ಟು ಹಿಂತಿರುಗಿದೆವು. ಕಾಫಿ, ಕುಡ್ಕೊಂಡು ಹೋಗೆಂಬ ಒತ್ತಾಯಕ್ಕೆ ಅಲ್ಲೇ ನಿಂತೆ. ''ಆಫ್ಟರ್ ಆಲ್ ದಿಸ್ ಸ್ಟ್ರೆನ್ಯುಯಸ್ ವರ್ಕ್ ಬೇಕೇ ಬೇಕು'' ಎಂದು ಆಕೆ ಹಿಂದೇನೇ ಅವರ ಅಡಿಗೆ ಮನೆಗೆ ಹೊರಟೆ. ರಂಗತ್ತೆ ಕಾಫಿ ಬೆರೆಸ್ತಾ ಏನೇನೋ ಮಾತಾಡ್ತಾ ಇದ್ರು. ನನ್ನನ್ನ ಹಾನರ್ ಮಾಡೋಕೆ. ನನಗೆ ಮಾತ್ರ ಆ ವಜ್ರದ ಮೂಲ ನನ್ನ ತಲೇನ ಕೊರೀತಿತ್ತು. ಇದು ಮಿಸ್ಟರಿ ಆಫ್ ದ ಮಿಸ್ಸಿಂಗ್ ವಜ್ರ ಅಲ್ಲ, ಮಿಸ್ಟರಿ ಆಫ್ ದ ಫೌಂಡ್ ವಜ್ರ? ಜೊತೆಗೆ ಇಷ್ಟು ವಜ್ರಗಳಿರುವ ರಂಗತ್ತೇಗೆ ಏಕೆ ಇದು ಸಿಕ್ತು? ನಂಗ್ಯಾಕೆ ಸಿಗಲಿಲ್ಲ ಅಂತಲೂ ಅನ್ನಿಸದೆ ಇರಲಿಲ್ಲ. ಕಾಫಿ ಕೈಗಿತ್ತ ರಂಗತ್ತೆ ಸೆಖೆ ಎಂದು ಫ್ಯಾನ್ ಆನ್ ಮಾಡಿ ತಮ್ಮ ಕೂದಲನ್ನ ಗಂಟು ಕಟ್ಟಲು ಕ್ಲಿಪ್ ಹೊರ ತೆಗೆದರು. ''ಇದ್ಯಾವುದು ಹೊಸಾ ಕ್ಲಿಪ್, ಎಷ್ಟು ಚೆನ್ನಾಗಿದೆ'' ಎಂದು ನಾನು ಆ ಕ್ಲಿಪ್ಪನ್ನು ಕೈಗೆತ್ತಿಕೊಂಡಾಗ ಆ ಕರೀ ಕ್ಲಿಪ್ಪಿನ ಮೇಲೆ ಹುದಗಿಸಿದ್ದ ಎರಡು ಪುಟ್ಟ ಹೂವುಗಳ ಮಧ್ಯೆ ಬೊಚ್ಚು ಬಾಯ್ಬಿಟ್ಟಂತ ಜಾಗ ಕಾಣಿಸಿತು! ಅದೇ ನಮ್ಮ ''ವಜ್ರ''ದ ಮೂಲ ಸ್ಥಾನ ಎಂದು ಹೊಳೆದಾಗ - ಆರ್ಕಿಮಿಡೆಸ್‌ನ ಕಾಲವಾಗಿದ್ದರೆ ''ಯೂರೇಕಾ'' ಅನ್ನಬಹುದಿತ್ತೇನೋ. ನಮ್ಮ ಕಾಲವಾದ್ದರಿಂದ 'ಯೂ - ಸಿಲ್ಲಿ' ಅಂತ ಬಾಯಿಂದ ಹೊರ ಬಿತ್ತು!

ಪರಿಸ್ಥಿತಿ ತಹಬಂದಿಗೆ ಬಂದ ಮೇಲೆ ರಂಗತ್ತೆಗೆ ನನ್ನಿಂದ ಒಂದು ಪ್ರಮಾಣ ಬೇಕಿತ್ತು. ಅದೇನೆಂದ್ರೆ, ಈ ಪ್ರಸಂಗಾನ ಯಾರಿಗೂ ನಾನು ಹೇಳಬಾರದು. ಆಫ್ ಆಲ್ ಪರ್ಸನ್ಸ್, ಮಾವನಿಗಂತೂ ಹೇಳಲೇಕೂಡದು ಇಷ್ಟೆಲ್ಲಾ ಆದ ಮೇಲೆ ಪ್ರಮಾಣದ ಭಾರ ಬೇರೆ ಎಷ್ಟು ಹೊರಲಿ ನಾನೂನೂ? ಅದಕ್ಕೆ ನಿಮಗೆ ಮಾತ್ರ ಹೇಳಿದ್ದೀನಿ, ಅಷ್ಟೆ!

*

# ಹೊಸ ಕಾಲದ ಪ್ರೀತಿಯ ಹನಿಗಳು

**- ಬಿ.ಕೆ. ಗಣೇಶ್**

**ಒ**ಲವ ದಕ್ಕಿಸಿಕೊಳ್ಳೋದು ಸುಲಭದ ಮಾತಲ್ಲ. ಅದಕ್ಕಾಗಿ ಹಿಂದೆ ಮುಂದೆ ಓಡಾಡಿ, ಒದ್ದಾಡಿ, ಪರದಾಡಿ, ಹೊಡೆದಾಡಿ, ಕಾಡಿ, ಬೇಡಿ - ಕೊನೆಗೆ ಸಿಕ್ಕಿದ್ದೆಷ್ಟೋ, ಬಿಟ್ಟಿದ್ದೆಷ್ಟೋ. ಕೆಲವರು ಪ್ರೀತಿ ಸಿಗದೆ ಬದುಕು ಕಳಕೊಂಡರೆ, ಇನ್ನು ಕೆಲವರು ಅದು ಸಿಕ್ಕಿ ಬದುಕು ಕಳಕೊಂಡಿದ್ದಾರೆ. ಪ್ರೀತಿಯನ್ನು ದಕ್ಕಿಸಿಕೊಳ್ಳುವ ಪರಿ ಕಾಲಕಾಲಕ್ಕೆ ಬದಲಾಗಿದೆ. ಬದಲಾಗುತ್ತಲೇ ಇದೆ.

ಹೊಸ ಬಗೆಯ ಮನಗೆಲ್ಲುವ, ಹೊಗಳುವ, ಕುಟುಕುವ, ಪಿಕ್ ಅಪ್‌ಲೈನ್‌ಗಳು ಇಲ್ಲಿವೆ

ಈಗಂತೂ ಫೇಸ್‌ಬುಕ್ಕಿನಲ್ಲಿ ಪರಿಚಯವಾಗಿ ವಾಟ್ಸ್ ಆ್ಯಪ್‌ನಲ್ಲಿ ಲವ್ವಾಗಿಬಿಡುವ ಕಾಲ. ಸರಸದ ದೀರ್ಘ ಸಂವಾದಗಳೆಲ್ಲ ಒನ್‌ಲೈನಿಗೆ ಬಂದು ನಿಂತುಬಿಟ್ಟಿದೆ. ಒಂದೊಂದು ಲೈನಿನಲ್ಲೇ ಪ್ರೀತಿಯನ್ನು ಗೆಲ್ಲುವ ವರಸೆಗಳು ಶುರುವಾಗಿವೆ. ಅಂಥ ಹೊಸ ಬಗೆಯ ಮನಗೆಲ್ಲುವ, ಹೊಗಳುವ, ಕುಟುಕುವ, ಪಿಕ್ ಅಪ್‌ಲೈನ್‌ಗಳು ಇಲ್ಲಿವೆ.

- ನೀನು ನವೆಂಬರ್‌ನಲ್ಲಿ ಹುಟ್ಟಿದ್ದಾ? ಯಾಕಂದ್ರೆ ನೀನು ಕನ್ನಡದಷ್ಟೇ ಮುದ್ದಾಗಿದ್ದೀಯ.
- ನೀನು ನನ್ನ ಪಾಲಿನ ಡಿಕ್ಷನರಿ. ನನ್ನ ಬಾಳಿಗೆ ಹೊಸ ಅರ್ಥ ಕೊಟ್ಟೆ.
- ಗೆಳೆಯ, ನನ್ನ ಕಣ್ಣಲ್ಲಿ ನೀರಿದೆ. ನಿನ್ನ ಕಣ್ಣಲ್ಲಿರುವ ಬೆಂಕಿಯನ್ನು ಆರಿಸಲಾ?
- ಸ್ಸಾರಿ, ನಂಜೊತೆ ಮಾತನಾಡಿದ್ದೀಯಾ? ಇಲ್ವಾ? ಹಾಗಿದ್ರೆ ಈಗ ಮಾತನಾಡು.
- ಗೆಳತಿ, ನಿನ್ನ ಕಣ್ಣು ಬ್ಲಾಕ್‌ಹೋಲ್ ಇದ್ದ ಹಾಗೆ. ಅಲ್ಲಿಗೆ ಬಿದ್ದ ನಾನಿನ್ನೂ ಎದ್ದೇ ಇಲ್ಲ.
- ಗೆಳೆಯ, ನೀನು ಕ್ಯಾಮೆರಾನಾ? ಇಲ್ಲಾಂದ್ರೆ ನಿನ್ನ ನೋಡಿದಾಗಲೆಲ್ಲ ನಂಗ್ಯಾಕೆ ಸ್ಮೈಲ್ ಬರಬೇಕು.
- ನಿಮ್ಮ ಹೆಸರು ಗೂಗಲ್ಲಾ? ನಾನು ಹುಡುಕ್ತಿರೋದೆಲ್ಲ ನಿಮ್ಮತ್ರ ಇದೆ!
- ನೀನೆಷ್ಟು ಸ್ಟ್ರೈಟ್ ಫಾರ್ವರ್ಡ್ ಕಣೋ? ನಿಮ್ಮ ಮಾಜಿಗಳ ಹೆಸರನ್ನು ಎಷ್ಟು ನೇರವಾಗಿ ಹೇಳುತ್ತಿ!
- ನೀನು ನನ್ನ ಪಾಲಿನ ಫೇಸಬುಕ್. ನನ್ನ ಮೈಂಡಲ್ಲಿರುವುದನ್ನೆಲ್ಲ ಬರೆಯಬಹುದಾ?
- ನೀನು ಆರ್ಗಾನಿಕ್. ಯಾಕಂದ್ರೆ ಕೃತಕ ಬಣ್ಣ ಹಾಕದ, ಶುದ್ಧ ಹಣ್ಣು.
- ಕಳೆದ ಜನ್ಮದಲ್ಲಿ ನಂಜೊತೆ ಇದ್ದೆ ನೀನು. ಈಗ ಮತ್ತೆ ಘರ್ ವಾಪಸಿ ಆಗ್ತೀಯಾ?
- ತುಂಬಾ ಖುಷಿಯಾಗ್ತಿದೆ. ನಾಲ್ಕು ಕೈಯಲ್ಲಿ ಚಪ್ಪಾಳೆ ತಟ್ಟೋಣ ಅನ್ನಿಸ್ತಾ ಇದೆ. ನಿಂದೂ ಕೊಡ್ತೀಯಾ?

- ನಿನ್ನ ಪೂರ್ತಿ ಹೆಸರು ಹೇಳ್ತೀಯಾ? ಇನ್ಶೂರೆನ್ಸಿಗೆ ನಾಮಿನಿ ಮಾಡಬೇಕಾಗಿತ್ತು!
- ನನ್ನ ಸೆಲ್ಫೀ ತಗೋಬೇಕೂಂತ ಇದ್ದೀನಿ. ಜತೆ ನಿಂತು ಹೆಲ್ಪ್ ಮಾಡ್ತೀಯಾ?
- ನಾನು ಒಬಾಮಾನಿಗಿಂತ ಲಕ್ಕೀ. ಯಾಕಂದ್ರೆ ಜತೆಗೆ ನಿನ್ನಂಥ ಸುಂದರಿ ಇದ್ದಾಳೆ.
- ನೀನು ಆರ್‌ಕೆ ಲಕ್ಷ್ಮಣ್ ಕಾರ್ಟೂನ್ ಇದ್ದ ಹಾಗೆ ಕಣೋ. ಒಂದೇ ಲೈನಿನಲ್ಲಿ ಎಷ್ಟೊಂದು ವಿಷಯ ಹೇಳುತ್ತಿ.
- ನಾವಿಬ್ಬರೂ ಸಾಕ್ಷಿ ಮಹಾರಾಜ್ ಆಶೀರ್ವಾದ ಪಡೆಯೋಣವಾ? ನೀನು ರೆಡಿನಾ?
- ನೀನು ಅಷ್ಟು ಬೇಗ ಹೇಗೆ ಎತ್ತರ ಆದಿ? ನಿನ್ನೆ ನನ್ನ ಭುಜದ ತನಕ ಬರುತ್ತಿದ್ದಿ. ಈಗ ತಲೆಯವರೆಗೆ ಬಂದೆ!
- ನೀನು ನನ್ನ ಮೊಬೈಲ್‌ನ ಆಂಡ್ರಾಯ್ಡ್, ನನ್ನ ಲ್ಯಾಪ್‌ಟಾಪ್‌ನ ವಿಂಡೋಸ್.
- ಈಗಷ್ಟೇ ನಾನು ಶಾದಿ ಡಾಟ್ ಕಾಮ್ ರಿಜಿಸ್ಟ್ರೇಷನ್ ಕ್ಯಾನ್ಸಲ್ ಮಾಡಿ ಬಂದೆ.
- ನಾನು ಕಿಸೆಯಲ್ಲಿ ಯಾವಾಗಲೂ ಚಾಕೊಲೇಟ್ ಇರುತ್ತದೆ. ಅದಕ್ಕೆ ನಿನ್ನ ಹೆಸರಿಟ್ಟಿದ್ದೇನೆ.
- ನೀನು ನನ್ನ ಹೊಸ ಡಿಸ್ಕವರ್, ಲೈಫ್ ಆಗುತ್ತದೆ ಝಿಂಗ್ ಝೂಂಗ್!
- ದೋನಿ ಸೆಂಚುರಿ ಹಿಂದೆ ಸಾಕ್ಷಿ ಇದ್ದಾಳೆ. ನಾನು ಲೈಫಲ್ಲಿ ಸೆಂಚುರಿ ಬಾರಿಸೋದಕ್ಕೆ ನೀನು ಸಾಕ್ಷಿಯಾಗಿ ಜತೆಗೆ ಬಾಳ್ತೀಯಾ?
- ನಾನು ಒಂಥರಾ ಫ್ಲಿಪ್‌ಕಾರ್ಟ್ ಇದ್ದ ಹಾಗೆ. ನಿನಗೆ ಬೇಕಾಗಿರುವುದನ್ನೆಲ್ಲ ಕೊಡ್ತೀನಿ. ಹೇಳಿದ ಟೈಮಲ್ಲಿ ಡೆಲಿವರಿ ಮಾಡ್ತೀನಿ.

*

## ಹೋಲಿಕೆ

ಸಿಟ್ಟಾಗಿದ್ದ ಗಂಡನನ್ನು ಸುಮತಿ ಹತ್ತಿರ ಬಂದು ರೀ ಯಾಕ್ರೀ ಇಷ್ಟೊಂದು ಸಿಟ್ಟಾಗಿದೀರ ಅಂತ ಕೇಳಿದ್ದಕ್ಕೆ, ಸುಬ್ಬಣ್ಣ ಇನ್ನೇನೇ ಮತ್ತೆ ಎದುರು ಮನೆ ರಾಮಪ್ಪ ನನ್ನನ್ನು ಅವರ ಮನೆ ನಾಯಿಗೆ ಹೋಲಿಸ್ತಾನೆ. ಎಷ್ಟು ಧೈರ್ಯ ಇರಬೇಕು ಅವನಿಗೆ ಅಂದ. ಅದಕ್ಕೆ ಸುಮತಿ ಹೋಗ್ಲಿ ಬಿಡಿ ಏನೋ ಗೊತ್ತಿಲ್ದೆ ಹಾಗಂದಿದಾರೆ ಇನ್ಮೇಲೆ ಅವರು ಹಾಗನ್ನೋದಿಲ್ಲ ಅಂದಳು. ನಿನಗೆ ಹೇಗೆ ಗೊತ್ತೇ ಅಂತ ಕೇಳಿದ್ದಕ್ಕೆ, ಇವತ್ತು ರಾಮಪ್ಪ ನಿಮ್ಮನ್ನು ಅವರ ಮನೆ ನಾಯಿಗೆ ಹೋಲಿಸಿದ ಮೇಲೆ ಆ ನಾಯಿ ಹಾಲೂ ಕುಡಿದೇ ಅನ್ನಾನೂ ತಿನ್ನದೇ ಸತ್ತೇ ಹೋಯ್ತಂತೆ ಅಂದಳು.

# ಆ ಮೀ ಆ

**– ಆನಂದ**

ಆದಾಯ ಮೀರಿದ ಆಸ್ತಿ ಎಂದರೇನು ಎಂದು ಹೆಂಡತಿ ಕೇಳಿದಳು. ಆಗಷ್ಟೆ ಆಕೆ ಜಯಲಲಿತಾ ನಿರ್ದೋಷಿ ಎಂದು ಜಡ್ಜ್ ಕುಮಾರಸ್ವಾಮಿ ಅರಿಥ್ಮೆಟಿಕ್ ಇದ್ದ ತೀರ್ಪನ್ನು ಅತ್ಯಧಿಕ ಪ್ರಸಾರವುಳ್ಳ ದಿನಪತ್ರಿಕೆಯಲ್ಲಿ ಓದಿದ್ದಳು.

ಆ ಪ್ರಶ್ನೆಗೆ ನಾನು ವಿವರವಾಗಿ, ಸೋದಾಹರಣೆಯೊಂದಿಗೆ ಅರುಣ್ ಶೌರಿ ತರಹ ವಿವರಿಸುವಾ ಎಂದು ಕೊಂಡು ಆಚೆ ಮನೆ ಪದ್ಮಾಕ್ಷಿ ಇದಾರಲ್ಲ.. ಎಂದು ಪ್ರಾರಂಭಿಸಿದೆ.

**ಯಕಶ್ಚಿತ್ ಒಬ್ಬ ಅಂಚೆ ಪೇದೆಗೆ ಆರು ಮಂದಿ ಹೆಣ್ಣು ಮಕ್ಕಳಿರುವುದು ಆದಾಯಕ್ಕೆ ಮೀರಿದ ಆಸ್ತಿ ಆಗದೆ?**

ಅದೇ ಕಾರ್ಯನಿರ್ವಾಹಕ ಅಭಿಯಂತರ ಪತ್ನಿ, ಅಂದರೆ ಎಕ್ಸಿಕ್ಯುಟಿವ್ ಇಂಜನಿಯರ್..?

ಹೌದು. ಅವರ ಮನೇಲಿ ಏನೇನಿದೆ? ಎಂದು ಕೇಳಿದೆ.

ಏನೇನಿದೆ? ಏನೇನಿಲ್ಲ ಎಂದು ಕೇಳಿ. ಅವರ ಕಲರ್ ಟೀವಿ ಸ್ಕ್ರೀನ್ ನಮ್ಮನೆ ಕಿಟಕಿ ಅಷ್ಟು ದೊಡ್ಡದು, ಅವರ ಫ್ರಿಜ್ ನಮ್ಮನೆ ಬೀರು ತರಹ ಇದೆ, ಆಕೆ ಯಾವುದಾದರೂ ಫಂಕ್ಷನ್‌ಗೆ ಹೋದಾಗ ಅವರ ಮೈಮೇಲಿರುವ ಒಡವೆ ನೋಡಿದರೆ ಒಂದು ಮೊಬೈಲ್ ಒಡವೆ ಅಂಗಡಿ ತರಹ ಇರುತ್ತೆ, ಎರಡು ಮೂರು ಕಾರು ಮನೆ ಮುಂದೆ ನಿಂತಿರುತ್ತೆ. ಮೊನ್ನೆ ತಾನೆ ಅವರು ಫಾರಿನ್ ಟೂರ್ ಮುಗಿಸಿ ಇನ್ನೂ ಜೆಟ್ ಲ್ಯಾಗ್ ಎಂದು ನರಳಾಡ್ತಿದಾರಂತೆ.. ಎಂದು ಅವು ಯಾವುದೂ ನಮ್ಮನೆಯಲ್ಲಿ ಇಲ್ಲ ಎಂಬ ಧ್ವನಿಯಲ್ಲಿ ವಿವರಿಸಿದಳು.

ಅವರಿಗೆ ಅವೆಲ್ಲ ಹೇಗೆ ಸಿಕ್ಕಿತು? ಎಂದು ನಾನು ಪ್ರಸಿದ್ಧ ಲಾಯರ್ ತರಹ ಪಾಟೀ ಸವಾಲು ಮಾಡಿದೆ.

ಸಂಪಾದನೆ ಮಾಡಿದಾರೆ ಎಂದಳು – ನೀವು ಮಾಡಿಲ್ಲ ಎಂಬ ಟೋನಿನಲ್ಲಿ.

ಸಂಪಾದನೆಯಲ್ಲಿ ಎರಡು ವಿಧ. ಒಂದು ಸಂಬಳ ಬ್ಯಾಂಕಿಗೆ ನೇರವಾಗಿ ಜಮಾ ಆಗುವುದು. ಇನ್ನೊಂದು ಗಿಂಬಳ ಟೇಬಲ್ ಕೆಳಗೆ ದಾಟಿ ನೇರವಾಗಿ ಮನೆಗೆ ಬರುವುದು. ಆದಾಯ ಮೀರಿದ ಆಸ್ತಿ ಎಂದರೆ ಸಂಬಳದಿಂದ ಕೊಳ್ಳಲಾಗದ ಆದರೆ ಗಿಂಬಳದಿಂದ ಕೊಂಡವು ಎಂದು ಸೋದಾಹರಣೆಯೊಂದಿಗೆ ವಿವರಿಸಿ.

ಆದರೆ ಅದೂ ಸಂಪಾದನೆ ತಾನೆ? ಎಂದು ಸಲ್ಮಾನ್ ಖಾನ್ ಪರ ಲಾಯರ್ ತರಹ ಕೇಳಿದಳು.

ಆದರೆ ಈ ಸಂಪಾದನೆ ಕಾನೂನು ಬಾಹಿರ, ನಿಯಮಕ್ಕೆ ವಿರುದ್ಧ ಇರಬಾರದ. ಆದರೆ

ಇರುವ ಆಸ್ತಿ ಎಂದು ನಾನು ನಾನೇ ಜೆಥ್ ಮಲಾನಿ ಎಂದು ಭಾವಿಸಿ ವೀರಾವೇಶದಿಂದ ವಾದಿಸಿದೆ.

ಅದು ಹೇಗೆ ತಿಳಿಯುತ್ತೆ?

ನಿನಗೆ ಬರೋ ಸಂಬಳ ಇಷ್ಟು. ಈ ದುಡ್ಡಿನಲ್ಲಿ ಮನೆ ತಾಪತ್ರಯಾನೆಲ್ಲ ಕಳೆದು ಉಳಿದ ದುಡ್ಡಿನಲ್ಲಿ ಇಷ್ಟೆಲ್ಲಾ ಹೇಗೆ ಕೊಳ್ಳಲು ಸಾಧ್ಯವಾಯಿತು ಎಂದು ಕೇಳಿದಾಗ ಸೂಕ್ತ ಸಮಜಾಯಿಷಿ ನೀಡಿದರೆ ಒಪ್ಪಿಸಿದರೆ ಆಗ ಅದು ಆದಾಯ ಮೀರಿದ ಆಸ್ತಿ ಆಗದು ಎಂದು ವಿವರಿಸದೆ.

ನಾಳೆ ಅವರು ನಮ್ಮನೇಗೆ ಬಂದರೆ?

ಬರಲಿ. ಏನು ಹೆದರಿಕೆ ನನಗೆ. ನನ್ನ ಎಲ್ಲ ಅಕೌಂಟ್ ತೋರಿಸ್ತೀನಿ. ಎಲ್ಲಾ ಸರಿ ಇದೆ ನಿಮ್ಮಂತಹ ಪ್ರಾಮಾಣಿಕರು ಇರಬೇಕು ಎಂದು ನನ್ನ ಬೆನ್ನು ತಟ್ಟಿ ಹೋಗ್ತಾರೆ ಎಂದಾಗ ನಾನು ಥೇಟ್ ಕೇಜ್ರಿವಾಲ್ ಎಂದೇ ಭಾವಿಸಿದೆ.

ಆದರೆ ಅವಳೇನು ಇಂಪ್ರೆಸ್ ಆದಹಾಗೆ ಕಾಣಲಿಲ್ಲ.

ಮತ್ತೆ ಈ ಪುಸ್ತಕಗಳು? ಎಂದು ಕೇಳಿದಳು.

ಏನು ಪುಸ್ತಕಗಳು?

ಅದೇರಿ ಮನೇ ತುಂಬಾ ಇದೆಯಲ್ಲ ಅವು. ನಿಮ್ಮ ಸಂಬಳದ ಮನೆ ತಾಪತ್ರಯಾನೆಲ್ಲ ಕಳೆದು ಉಳಿದ ದುಡ್ಡಿನಿಂದ ಇವನ್ನೆಲ್ಲಾ ಕೊಳ್ಳಲು ಆಗುತ್ತಿತ್ತೇನು ಹೇಳಿ ಎಂದಳು.

ಇಲ್ಲ ಎಂದು ಪ್ರಾಮಾಣಿಕವಾಗಿ ಒಪ್ಪಿಕೊಂಡೆ. ಹೇಗಿದ್ದರೂ ನಾನು ಕೇಜ್ರಿವಾಲ್ ತಾನೆ?

ಮತ್ತೆ ಹೇಗೆ ಬಂದಿತು ನಿಮ್ಮ ಬಳಿ ಇವೆಲ್ಲ ಎಂದು ಕೇಳಿದರೆ?

ಓದಕ್ಕೆ ಅಂತ ಎರವಲು ತಂದಿದ್ದೆ, ವಾಪಸ್ ಮಾಡಿಲ್ಲ ಎಂದು ಸಮಜಾಯಿಷಿ ನೀಡುತ್ತೇನೆ ಎಂದೆ. ಆದರೆ ಧ್ವನಿ ಕೇಜ್ರಿವಾಲ್ ತರಹ ಇರಲಿಲ್ಲ.

ಈಚೆ ಮನೆ ವಿರೂಪಾಕ್ಷ ಇದಾರಲ್ಲ. ಯಾವುದೋ ಅಂಗಡೀಲಿ ಲೆಕ್ಕ ಬರಿತಾರಲ್ಲ..

ಅದೇ ದೊಡ್ಡ ಬೊಜ್ಜಿನವ?

ಅವರೇ. ನಿಮಗೆ ಇಷ್ಟು ಸಣ್ಣ ಸಂಬಳ ಇದ್ದರೂ ಇಷ್ಟು ದೊಡ್ಡ ಬೊಜ್ಜು ಹೇಗೆ ಬಂದಿತು ಎಂದು ಕೇಳಿದರೆ ಅದೂ ಆದಾಯಕ್ಕೆ ಮೀರಿದ ಆಸ್ತಿ ಎಂದು ಹೇಳಲು ಸಾಧ್ಯವೆ?

ನನಗೆ ಉತ್ತರ ಹೊಳೆಯಲಿಲ್ಲ.

ಮತ್ತೆ ನಾವು ಆ ಮತ್ತೀಕೆರೆ ಇದ್ದವಲ್ಲ ಆಗ ಔಟ್‌ಹೌಸ್‌ನಲ್ಲಿದ್ದ ಅಂಚೆ ಪೇದೆ ಅಣ್ಣಯ್ಯನಿಗೆ ಆರು ಜನ ಹೆಣ್ಣು ಮಕ್ಕಳಿದ್ರಲ್ಲಾ ಅದೂ ಆದಾಯ ಮೀರಿದ ಆಸ್ತಿ ಆಗೊಲ್ಲವೆ? ಎಂದು ಪಾಟೀ ಸವಾಲು ಮಾಡತೊಡಗಿದಳು.

ನಾನು ಕೇಸ್ ಅಡ್ಜರ್ನ್ಡ್ ಎಂದು ಹೇಳಿ ಮೇಲೆದ್ದೆ.

*

# ಅಪರಂಜಿಗೆ ಹಾರ್ದಿಕ ಶುಭಾಷಯಗಳು

## ಡಾ. ಎಚ್.ಎಸ್. ಮುರಳಿ

ನೇತ್ರ ವೈದ್ಯರು

**ದಿ ಐ ಕ್ಲಿನಿಕ್**

ಅಣ್ಣಯ್ಯ ಕಾಂಪ್ಲೆಕ್ಸ್

ಹೊಸಳ್ಳಿ ರಸ್ತೆ, ಮಂಡ್ಯ

ಫೋನ್: 224834

ಸಮಯ: ಬೆಳಗ್ಗೆ 9 ರಿಂದ 1 ಗಂಟೆ

**ಮಾಲಸ ಐ ಕ್ಲಿನಿಕ್**

ಬಸ್ ಸ್ಟಾಂಡ್ ಸರ್ಕಲ್

ಚಾಮುಂಡೀಪುರಂ

ಮೈಸೂರು 570 004

ಫೋನ್: 2332225

ಸಮಯ: ಸಂಜೆ 5 ರಿಂದ 8 ಗಂಟೆ

ಮೊಬೈಲ್: 94487 40093

# ಬೇಡುವವನ ಗುಣ

**- ಬೇಲೂರು ರಾಮಮೂರ್ತಿ**

**ಯಾ**ವುದೋ ಸಮಾರಂಭಕ್ಕೆಂದು ಶ್ರೀನಿವಾಸನ ಕುಟುಂಬ ಸಿದ್ಧವಾಗುತ್ತಿತ್ತು. ಒಳ್ಳೆಯ ಕೆಲಸಕ್ಕೆಂದು ಹೊರಟಿರುವಾಗ ಮನಸ್ಸು ಒಳ್ಳೆಯದೇ ಇರಬೇಕು. ಸುಮ್ಮನೇ ಮುಖ ಗಂಟು ಹಾಕಿಕೊಳ್ಳುವುದು, ಬೇಜಾರು ಮಾಡಿಕೊಳ್ಳೋದು ಇವೆಲ್ಲ ಬೇಡ ಅಂದುಕೊಂಡಿದ್ದ. ಶ್ರೀನಿವಾಸ ಅಂಥಾ ಸಿಡುಕನೇನೂ ಅಲ್ಲ. ಆದರೆ ಅವನ ಮನಸ್ಸಿಗೆ ಹಿಡಿಸದ ಸಂಗತಿ ನಡೆದರೆ ಏಕ್‌ದಂ ಸಿಟ್ಟಿಗೇಳುತ್ತಾನೆ. ಹನ್ನೊಂದು ಗಂಟೆಗೆ ಸರಿಯಾಗಿ ನಾವು ಮನೆ ಬಿಡಬೇಕು. ಅಲ್ಲಿಗೆ ಹೋಗೋಕೆ ಅರ್ಧ ಗಂಟೆನಾದರೂ ಬೇಕು. ನೀನು ಕಡೇ ಘಳಿಗೆಯಲ್ಲಿ ತಡ ಮಾಡಬೇಡ ಅಂತ ಹೆಂಡತಿಗೆ ಸಾರಿ ಸಾರಿ ಹೇಳಿದ್ದ. ಹೆಂಡತಿ ಪರಿಮಳ ಎಲ್ಲ ಹೆಣ್ಣುಗಳಂತೆಯೇ ಸ್ವಲ್ಪ ಬೇಗೆ ಸ್ವಲ್ಪ ನಿಧಾನ ಸ್ವಲ್ಪ ಆತುರ ಸ್ವಲ್ಪ ಸಾವಧಾನ ಅನ್ನೋ ತರಹದ ಹೆಣ್ಣು. ಆದರೆ ಅವತ್ತು ಶ್ರೀನಿವಾಸ ಹೇಳಿದ ಹಾಗೆಯೇ ಬೇಗ ಬೇಗ ರೆಡಿಯಾದಳು. ಮಕ್ಕಳು ಪುಷ್ಪ ಮತ್ತು ಗಿರಿ ಇಬ್ಬರೂ ಆಗಲೇ ಸಿದ್ಧವಾಗಿದ್ದರು. ಹನ್ನೊಂದು ಗಂಟೆಗೆ ಇನ್ನೂ ಐದು ನಿಮಿಷ ಇರೋ ಹಾಗೆಯೇ ಎಲ್ಲರೂ ಮನೆಯಿಂದ ಹೊರಗೆ ಬಂದರು. ಮನೆ ಎದುರಿಗೆ ಭಿಕ್ಷುಕ ನಿಂತು ದೈನ್ಯದಿಂದ ಅಣ್ಣಾ ಏನಾದರೂ ಹಾಕಿ ಅಣ್ಣಾ ಅಂದು ತನ್ನ ಅಲ್ಯುಮಿನಿಯಂ ತಟ್ಟೆ ಮುಂದಿಟ್ಟ. ಭಿಕ್ಷುಕನನ್ನು ನೋಡಿ ಶ್ರೀನಿವಾಸನಿಗೆ ಎಲ್ಲಿಲ್ಲದ ಸಿಟ್ಟು ಬಂತು. ಅವನನ್ನು ಬಾಯಿಗೆ ಬಂದ ಹಾಗೆ ಬೈದ. ಪರಿಮಳ ಸುಮ್ನೆ ಕೂಗಿ ನೀವ್ಯಾಕೆ ಮನಸ್ಸು ಹಾಳು ಮಾಡ್ಕೊತೀರ ಸುಮ್ಮನೇ ಬನ್ನಿ ಹೋಗೋಣ ಅಂದಳು. ಒಳ್ಳೇ ಕೆಲಸಕ್ಕೆ ಹೊರಟಿರುವಾಗ ಈ ದರಿದ್ರದವನ ಮುಖ ನೋಡೋ ಹಾಗಾಯ್ತಲ್ಲ. ಈ ಭಿಕ್ಷುಕರಿಗೆ ಬೇರೆ ಸಮಯವೇ ಇಲ್ಲ ಅಂತ ಮತ್ತೆ ಕೂಗಾಡಿದ. ಇವರ ಕೂಗಾಟ ನನಗೆ ಅಲ್ಲವೇ ಅಲ್ಲ ಅಂತ ಭಿಕ್ಷುಕ ಅವ್ವಾ ನೀವಾದ್ರೂ ಏನಾದ್ರೂ ಕೊಡಿ ತಾಯೀ ಬೆಳಗ್ಗೆಯಿಂದ ಏನೂ ತಿಂದಿಲ್ಲ ಅಂದು ಮತ್ತೆ ತಟ್ಟೆ ಮುಂದೆ ಹಿಡಿದ. ಶ್ರೀನಿವಾಸ ಆತುರಾತುರದಿಂದ ಮನೆಗೆ ಬೀಗ ಹಾಕಿ ಹೊರಟ. ಹೆಂಡತಿ ಎಚ್ಚರಿಸಿದ್ದರಿಂದ ಮತ್ತೆ ಕೂಗಾಡಲಿಲ್ಲ. ಆದರೂ ಅವನಿಗೆ ಮನಸ್ಸು ಕೆಟ್ಟು ಹೋಗಿತ್ತು. ಭಿಕ್ಷುಕ ಅಂದ್ರೆ ಬೇಡೋದೇ ಅವನ ಕೆಲಸ. ಅವನಿಗೆ ಹೊತ್ತು ಗೊತ್ತು ಏನೂ ಇಲ್ಲ. ಯಾರನ್ನು ಬೇಡಬೇಕು, ಯಾವಾಗ ಬೇಡಬೇಕು, ಏನನ್ನು ಬೇಡಬೇಕು ಇವೆಲ್ಲ ಅವರಿಗೆ ಬೇಡದ ವಿಚಾರ. ಏನಾದರೂ ಸರಿ, ಎಷ್ಟಾದರೂ ಸರಿ ಸಿಕ್ಕರೆ ಸಾಕು ಅಂತ ಅವರ ಕಾತುರ.

ಕಾರಿನಲ್ಲಿ ಹೋಗುವಾಗ ಶ್ರೀನಿವಾಸನ ಸಿಟ್ಟು ಇನ್ನೂ ಇಳಿದಿರಲಿಲ್ಲ. ಪರಿಮಳ ಗಂಡನ ಕೋಪ ಶಮನವಾಗಲಿ ಅಂತ ಮಾತಾಡಿಸಲಿಲ್ಲ.

ಹೋದ ಕೆಲಸಕ್ಕೆ ಏನು ತೊಂದರೆಯಾಗಲಿಲ್ಲ. ಭಿಕ್ಷುಕ ಮನೆ ಮುಂದೆ ಬಂದಿದ್ರಿಂದ ಹೀಗಾಯ್ತು ಅಂತ ಅಂದುಕೊಳ್ಳುವಂಥಾದ್ದು ಏನೂ ನಡೆಯಲಿಲ್ಲ. ಹೋಗುವಾಗ ಸಿಟ್ಟಿನಿಂದ ಹೊರಟಿದ್ದ ಶ್ರೀನಿವಾಸ ವಾಪಸ್ ಬರುವಾಗ ನೆಮ್ಮದಿಯಿಂದಿದ್ದ.

ಆದರೆ ಮನೆ ಮುಂದೆ ಕಾರು ನಿಂತ ತಕ್ಷಣ ಮತ್ತೆ ಅವನ ಸಿಟ್ಟು ನೆತ್ತಿಗೇರಿತು. ಏಕೆಂದರೆ ಆ ಭಿಕ್ಷುಕ ಇನ್ನೂ ಅಲ್ಲೇ ಇದ್ದ. ಇವನು ನಾವು ಬರೋದನ್ನೇ ಕಾಯ್ದುಕೊಂಡಿದ್ದು ಮತ್ತೆ ಭಿಕ್ಷೆ ಬೇಡೋಕೆ ಸಿದ್ಧವಾಗಿದ್ದಾನೆ ಅಂತ ಶ್ರೀನಿವಾಸನಿಗೆ ರೇಗಿತು. ಶ್ರೀನಿವಾಸ ದೊಡ್ಡ ಕಂಠದಿಂದ ಭಿಕ್ಷುಕನನ್ನು ಬೈಯೋಕೆ ಷುರು ಮಾಡಿದಾಗ ಭಿಕ್ಷುಕ ಒಂದ್ನಿಮಿಷ ಸ್ವಾಮಿ. ನೀವು ಭಿಕ್ಷೆ ಕೊಟ್ಟರೂ ಸಂತೋಷಾನೇ ಕೊಡದಿದ್ದರೂ ಸಂತೋಷಾನೇ ನಮ್ಮಂಥವರು ಕೋಪ ಮಾಡ್ಕೊಬಾರದು ಎನ್ನೋದು ನಿಯಮ. ನೀವು ಏನೇ ಬೈದರೂ ನನಗೆ ಕೋಪ ಇಲ್ಲ. ಆದರೆ ನಾನು ಇನ್ನೂ ಇಲ್ಲೇ ಯಾಕೆ ಕೂತಿದೀನಿ ಅಂದ್ರೆ ನೀವು ನನ್ನನ್ನು ಬೈದು ಆತುರದಲ್ಲಿ ಹೋಗುವಾಗ ಮನೆಗೆ ಸರಿಯಾಗಿ ಬೀಗ ಹಾಕೇ ಇಲ್ಲ. ಸುಮ್ಮನೇ ಬೀಗ ಚಿಲಕಕ್ಕೆ ತಗುಲಿಕೊಂಡಿದೆ ಅಷ್ಟೆ. ಇದನ್ನು ನೋಡಿಕೊಂಡು ಯಾರಾದರೂ ಮನೆ ದೋಚಬಹುದು ಅಂತ ನಾನು ಇಲ್ಲೇ ಕಾಯ್ತಿದ್ದೆ. ಅಂಥದೇನಾದ್ರೂ ಆದ್ರೆ ನಾನು ನಿಮ್ಮ ಮೊಬೈಲ್‌ಗೆ ಕರೆ ಮಾಡ್ತಿದ್ದೆ ಅಂದ. ಶ್ರೀನಿವಾಸ, ಪರಿಮಳ ಮಕ್ಕಳು ಎಲ್ಲರೂ ಗಾಬರಿಯಿಂದ ಮನೆ ಬಾಗಿಲಿನತ್ತ ನೋಡಿದರೆ ಭಿಕ್ಷುಕ ಹೇಳಿದ್ದು ಸರಿ ಬೀಗ ಸುಮ್ಮನೇ ಚಿಲಕಕ್ಕೆ ತಗುಲಿಕೊಂಡಿದೆ ಅಷ್ಟೆ. ಆತುರದಿಂದ ಎಲ್ಲರೂ ಒಳಗೆ ಹೋಗಿ ಏನೂ ಕಳ್ಳತನ ಆಗಿಲ್ಲ ಅಂತ ಖಾತರಿಪಡಿಸಿಕೊಂಡು ಮತ್ತೆ ಹೊರಬಂದರು. ಶ್ರೀನಿವಾಸ ನೀನು ನನ್ನ ಮೊಬೈಲ್‌ಗೆ ಕರೆ ಮಾಡ್ತೀನಿ ಅಂದ್ಯಲ್ಲ ನನ್ನ ಮೊಬೈಲ್ ನಂಬರ್ ನಿನಗೆ ಹೇಗೆ ಗೊತ್ತು ಅಂತ ಕೇಳಿದ್ದಕ್ಕೆ ಭಿಕ್ಷುಕ ಹೋದವಾರ ನಾನು ಹೀಗೆ ಭಿಕ್ಷೆ ಕೇಳೋಕೆ ಬಂದಿದ್ದಾಗ ನೀವು ಯಾರತ್ರನೋ ಮಾತಾಡ್ತಾ ವಿಷಯ ತಿಳಿದ ಕೂಡಲೆ ನನ್ನ ಈ ನಂಬರ್‌ಗೆ ಕರೆ ಮಾಡು ಅಂತ ಹೇಳ್ತಿದ್ರಲ್ಲ ಆಗ ನಾನು ಆ ನಂಬರನ್ನು ಗುರುತು ಹಾಕಿಕೊಂಡಿದ್ದೆ ಅಂದ. ಶ್ರೀನಿವಾಸನಿಗೆ ಏನು ಹೇಳಬೇಕೆಂದೇ ತಿಳಿಯದೇ ತಲೆ ತಗ್ಗಿಸಿದ. ಭಿಕ್ಷುಕ ಅಲ್ಲಿಂದ ಹೊರಟಾಗ ಪರಿಮಳ ಓಡಿಬಂದು ಒಂದ್ನಿಮಿಷ ನಿಂತ್ಕೋಪ್ಪ ಅಂದು ಅವನಿಗೆ ತಿಂಡಿ ಕೊಟ್ಟು ಒಂದು ನೂರು ರೂಪಾಯ್ನೂ ಕೊಟ್ಟು ನಾಳೆಯಿಂದ ದಿನಾ ಹನ್ನೆರಡೂವರೆಗೆ ಬಾಪ್ಪ ಅಷ್ಟೊತ್ತಿಗೆ ಅಡಿಗೆ ಆಗಿರುತ್ತೆ ಅಂದಳು. ಭಿಕ್ಷುಕ ಯಾವ ಬಿಗುಮಾನವನ್ನೂ ಮಾಡದೇ ಕೊಟ್ಟ ತಿಂಡಿ ದುಡ್ಡು ಎಲ್ಲವನ್ನೂ ತೆಗೆದುಕೊಂಡು ಇಬ್ಬರಿಗೂ ನಮಸ್ಕರಿಸಿ ಹೊರಟ.

ಭಿಕ್ಷುಕನನ್ನೇ ನೋಡುತ್ತಿದ್ದ ಶ್ರೀನಿವಾಸ ಈ ಬದುಕಿನಲ್ಲಿ ಏನು ಬೇಕಾದರೂ ಆಗಬಹುದು ಎಂದುಕೊಂಡ.

*

## ಪದಬಂಧದ ಉತ್ತರ

**ಎಡದಿಂದ ಬಲಕ್ಕೆ**

2. ಅತಿಮಾನುಷ 4. ಲೆಕ್ಕ 5. ರಾಣಿ 6. ವನಿತ 7. ಕಟವಾಯಿ 8. ಬರಡು ಭೂಮಿ 11. ಪದಚ್ಯುತಿ 12. ಭಾವನೆ 13. ಶವ 14. ಋಷಿ 15. ನವೀಕರಣ

**ಮೇಲಿಂದ ಕೆಳಕ್ಕೆ**

1. ಪರ್ಯವಸಾನ 2. ಅಕ್ಕ 3. ಷರಾಯಿ 4. ಲೆತಕ್ಕಬ 7. ಕರಡುಪ್ರತಿ 9. ಮಿತಭಾಷಿ 10. ಸವಿನೆನಪು 11. ಪವನ 14. ಋಣ

# ತಾತ-ಮೊಮ್ಮಗ ಸಂವಾದ

**- ಸಿ.ಆರ್. ಸತ್ಯ**

''ಅಜ್ಜಾ ಯಾಕೆ ಬೇಜಾರು ಆಗ್ತಾ ಇದ್ಯಾ? ನನ್ನ ಐ ಪ್ಯಾಡ್ ಕೊಡಲಾ? ಯಾವುದಾದರೂ ಗೇಮ್ ಹಾಕಿ ಕೊಡಲಾ?''

''ನಿನ್ನ ಐ ಪ್ಯಾಡ್ ಇಟ್ಕೊಂಡು ನಾನೇನು ಮಾಡಲೋ? ನಿನ್ನ ಅಜ್ಜಿಗೆ ಹೇಳಿ ಬಿಸಿನೀರು ರೆಡಿ ಇದ್ದರೆ ಆ ಹಾರ್ಟ್ ಪ್ಯಾಡ್ ತೊಗೊಂಡು ಬಾ. ಯಾಕೋ ಮಂಡಿ ನೋವು ಜಾಸ್ತಿ ಆಗ್ತಾ ಇದೆ.''

''ಅಜ್ಜ ಅದ್ಯಾಕೆ ದಿನಾನೂ ನೀನು ಆ ಮಿಲ್ಕ್ ಬೂತ್‌ಗೆ ನಡ್ಕೊಂಡು ಹೋಗಿ ಹಾಲನ್ನ ತರಬೇಕು? ಆನ್‌ಲೈನ್ ಆರ್ಡರ್ ಮಾಡಬಹುದಲ್ಲಾ ಅಜ್ಜಾ!''

''ಮಾಡ್ಬಹುದು ಮರಿ. ಆದರೆ ನಮ್ಮನೇಗೆ ಹಾಲು ಬರೋಕ್ಕೆ ನಾನು ಒಂದು ಪೈಪ್‌ಲೈನ್ ಹಾಕ್ಬೇಕಲ್ಲೋ!''

''ಅಜ್ಜಾ ಅಜ್ಜಿ ಹ್ಯಾಪಿ ಬರ್ತ್‌ಡೇ ದಿನ ನೀನು ಯಾಕೆ ಅಜ್ಜೀಗೆ ಮುತ್ತು ಕೊಡೋಲ್ಲಾ?''

''ನನಗೆ ತಲೆ ಎತ್ತೋಕ್ಕೆ ಆಗಲ್ಲ ಮರಿ - ಸ್ಪಾಂಡಿಲೈಟಿಸ್ಸು ಅಜ್ಜೀಗೆ ತಲೆ ಬಗ್ಗಿಸೋಕ್ಕೆ ಆಗಲ್ಲಪ್ಪ - ಬೆನ್ನು ನೋವು!''

''ಅಜ್ಜಾ, ನೀನ್ಯಾಕೆ ನಿಂದೇ ಒಂದು ವೆಬ್‌ಸೈಟ್ ಇಟ್ಕೋಬಾರ್ದು?''

''ಸದ್ಯ, ಈಗ ನನ್ನ ಕೈನಲ್ಲಿರೋ ತರ್ಟಿ ಫಾರ್ಟಿ ಸೈಟ್‌ನೇ ಎನ್ಕ್ರೋಚ್ಮೆಂಟ್‌ನಿಂದ ತಡಿಯೋಕ್ಕೆ ಆಗ್ತಿಲ್ಲ. ಇನ್ನು ಈ ವೆಬ್ ಸೈಟ್ ಬೇರೆ ಯಾಕಪ್ಪಾ?''

''ಅಜ್ಜಾ, ಡ್ಯಾಡಿಗೆ ಹೇಳಿ ನಿನಗೊಂದು ಲ್ಯಾಪ್ ಟಾಪ್ ಕೊಡಿಸ್ಲಾ?''

''ಯಾಕಪ್ಪಾ, ನೀವೆಲ್ಲಾ ಲ್ಯಾಪ್ ಟಾಪ್ಗಳಾಗೆ ಕುಣಿದು ಕುಪ್ಪಳಿಸಿ ನನ್ನ ತೊಡೆಗಳಿಗೆ ಇಲ್ಲಿ ತನಕ ಕೊಟ್ಟಿರೋ ವ್ಯಾಯಾಮ ಸಾಲದೂ ಅಂತಲೆ?''

''ಅಜ್ಜಾ ನಿನಗೆ ವಯಸ್ಸೆಷ್ಟು?''

''ಎಂಭತ್ತು ಆಯ್ತು ಮರಿ''

''ಹಾಗಾದರೆ ನೀನು ಚಿಕ್ಕವನಾಗಿದ್ದಾಗ ಮಹಾಭಾರತ, ರಾಮಾಯಣ ಎಲ್ಲಾ ಕಣ್ಣಾರೆ ನೋಡಿದ್ಯಾ?''

''ಹೌದು ಮರಿ ನಾನು ಪ್ರೈಮರಿ ಸ್ಕೂಲ್‌ನಲ್ಲಿ ಇದ್ದಾಗ ಮಹಾಭಾರತ ನಡೆದದ್ದು. ಮದುವೆ ಆದ ಮೇಲೆ ರಾಮಾಯಣ ಎಲ್ಲಾ ಮನೇಲೇ ನಡೀತು!''

''ಅಜ್ಜಾ ನಿಮಗೆ ಸ್ಕೂಲ್‌ನಲ್ಲಿ ಟೀಚರ್ಸು, ಸರ್‌ಗಳಾಗಿದ್ದರೋ, ಮಿಸ್ಸ್‌ಗಳಾಗಿದ್ದರೋ?''

''ಆಗ ಬರೀ ಸರ್‌ಗಳೇ ಇದ್ದರಪ್ಪ. ಮಿಸ್ಸ್‌ಗಳೆಲ್ಲಾ ಯಾಕೊ ಮಿಸ್ಸ್ ಆಗಿಬಿಟ್ಟಿದ್ರು!''

''ಅಜ್ಜಾ, ಇವತ್ತು ಸ್ಕೂಲ್‌ನಲ್ಲಿ ನಮ್ಮ ಮಿಸ್ಸ್, ಹ್ಯೂಮನ್ ಎವಲ್ಯೂಶನ್‌ನಲ್ಲಿ ಕೊನೇಘಟ್ಟ ಯಾವುದು ಅಂತ ನನ್ನನ್ನು ಕೇಳಿದ್ರು''.

''ನೀನು ಏನು ಹೇಳಿದೆ?''

''ನಾನು–ನಮ್ಮ ಅಜ್ಜ! ಅಂತ ಹೇಳಿದೆ!''

''ಯಾಕೋ..?''

''ಬರ್ತಾ ಬರ್ತಾ, ಮನುಷ್ಯನ ಹಲ್ಲುಗಳು ಮೊದಲಿದ್ದ ಕೋರೇ ಹಲ್ಲಿನ ರೂಪವನ್ನ ಕಳ್ಕೊಳ್ಳುತ್ತಾ, ಈಗ ನಮಗಿರೋ ತರಹ ಇನ್ನೂ ಸಣ್ಣ–ಸಣ್ಣಕ್ಕೆ ಆಗ್ತಾ ಇದ್ಯಲ್ಲಾ, ಅದಕ್ಕೆ!''

''ಸರಿ, ಅದಕ್ಕೂ ನನಗೂ ಏನು ಸಂಬಂಧ ಮರಿ?''

''ಸಣ್ಣ ಆಗ್ತಾ ಆಗ್ತಾ ಈಗ ನಿನಗೆ ಒಂದು ಹಲ್ಲೂ ಕಾಣಿಸದ ಹಾಗೆ ನಿನ್ನ ಬಾಯೆಲ್ಲಾ ಖಾಲಿ ಆಗಿದೆಯಲ್ಲಾ ಅಜ್ಜಾ, ಅದಕ್ಕೇ! ನೀನು ಲಾಸ್ಟ್ ಸ್ಟೇಜ್ ಆಫ್ ಎವಲ್ಯೂಶನ್!''

''ಅಜ್ಜಾ, ನೀನು ಚಿಕ್ಕವನಾಗಿದ್ದಾಗ ಜೀನ್ಸ್ ಪ್ಯಾಂಟ್ ಹಾಕ್ಕೋತಾ ಇದ್ಯಾ?''

''ಇಲ್ಲ ಮರಿ, ಆವಾಗ ಜೀನ್ಸ್ ಇರಲಿಲ್ಲ. ಆವಾಗ ಇದ್ದಿದ್ದು ಪ್ಯೂರ್ ಕಾಟನ್ ಬಟ್ಟೆಗಳಪ್ಪ. ಆದರೆ ಒಂದು ಸಲ ನಮ್ಮ ಪ್ಯಾಂಟ್‌ನ ಒಗೀತು ಅಂದರೆ, ಶ್ರಿಂಕ್ ಆಗಿ ಜೀನ್ಸ್ ತರಹಾನೇ ಆಗೋದು ಬಿಡು!''

''ಅಜ್ಜಾ, ನಿಂದೂ ಅಜ್ಜೀದೂ ಲೌವ್ ಮ್ಯಾರ್ರೇಜಾ?''

''ಫಿಫ್ಟಿ ಪರ್ಸೆಂಟ್ ಲೌವ್ ಮ್ಯಾರ್ರೇಜ್ ಅಂತ ಹೇಳ್ಬಹುದು ಮರಿ''

''ಹಾಗಂದರೇನು ಅಜ್ಜಾ?''

''ಲೌವ್ ಅಂದರೆ ಅದರ ಅರ್ಥ ನನಗೆ ಮಾತ್ರ ಗೊತ್ತಿತ್ತು. ಅಜ್ಜಿ ಆ ಪದಾನೇ ಕೇಳಿರಲಿಲ್ಲ ಕಣೋ!''

''ಅಜ್ಜಾ, ನೀನು ಫೇಸ್‌ಬುಕ್‌ನಲ್ಲಿ ಚಾಟ್ ಮಾಡ್ತಿದ್ಯಾ?''

''ಇಲ್ಲಪ್ಪ, ನನ್ನ ಜೀವಮಾನವೆಲ್ಲಾ ಎ. ಜೀಸ್ ಆಫೀಸ್‌ನಲ್ಲಿ ಅಕೌಂಟ್ ಬುಕ್‌ನಲ್ಲಿ ನೋಟ್‌ಗಳನ್ನು ಮಾಡ್ತಿದ್ದೆ ಅಷ್ಟೇ!''

''ಅಜ್ಜಾ, ನೀನು ಚಿಕ್ಕವನಾಗಿದ್ದಾಗ, ಯಾವ ಫೋನ್ ಇಟ್ಕೊಂಡಿದ್ದೆ? ಸ್ಮಾರ್ಟ್ ಫೋನಾ?''

''ಆವಾಗಲೆಲ್ಲಾ ಅಂತಹ ಫೋನೇ ಇರಲಿಲ್ಲ ಮರಿ!''

''ಓ ಗಾಡ್, ಮತ್ತೆ ಎಲ್ಲರ ಜೊತೆಗೂ ಹೇಗೆ ಮಾತಾಡ್ತಾ ಇದ್ರೀ, ಅಜ್ಜಾ?''

''ಲೋಕಲ್ ಕಾಲ್ಸ್ ಆದರೆ ಜೋರಾಗಿ ಕೂಗಿಕೊಂಡು ಒಬ್ಬರಿಗೊಬ್ಬರು ನೇರವಾಗೇ ಮಾತಾಡ್ತಿದ್ವಿ. ಹೊರ ಊರಿಗೆ ಅಂದ್ರೆ ಪೋಸ್ಟ್ ಆಫೀಸ್‌ಗೆ ಹೋಗಿ, ಟ್ರಂಕ್ ಕಾಲ್ ಅಂತ ಬುಕ್ ಮಾಡ್ತಾ ಇದ್ವಿ.''

''ಪೂರ್ ಅಜ್ಜ!!''

*

# ಆ...ಕ್ಷಿ... ಕ್ಷಮಿಸಿ ನಾನು ಸ್ವಲ್ಪ ಸೂಕ್ಷ್ಮ ರೀ...

**- ಶ್ರೀಕಂಠ ಗುಂಡಪ್ಪ**

ಆಕ್ಷಿ.......ಅಕ್ಷಿ......ಆ......ಕ್ಷಿ.......ಆ......ಆ......ಕ್ಷಿ ಕ್ಷಮಿಸಿ..... ನಾನು ಸ್ವಲ್ಪ ಸೂಕ್ಷ್ಮ ರೀ! ಮೊನ್ನೆ ಏನಾಯ್ತು ಅಂತೀರಾ ದೇವಸ್ಥಾನದಿಂದ ಬಂದವನೆ ಸುಸ್ತಾಗಿ ಕುರ್ಚಿಮೇಲೆ ಕಾಲು ಚಾಚಿ ಕೂತೆ. ಒಂದರ ಹಿಂದೆ ಒಂದು ಹಾಳಾದ್ದು ನಾಮುಂದು ತಾಮುಂದು ಅಂತಾ ಐದಾರು ಸೀನು ಬಂತು. ಅಡಿಗೆ ಮನೆ ಪಾತ್ರೆಗಳು ಹೆಚ್ಚು ಶಬ್ದ ಮಾಡತೊಡಗಿದವು. ನನ್ನ ಆ.....ಕ್ಷಿಗೂ ಆ ಶಬ್ಧಕ್ಕೂ ಏನು ಸಂಬಂಧ ಅಂತ ನೀವು ಕೇಳಬಹುದು. ಹಿಂದೇನೆ ಬಂದ ಗಡುಸಾದ ಧ್ವನಿ 'ಬಡಕೊಂಡೆ ನಾನು ದೇವಸ್ಥಾನಕ್ಕೆ ಹೋಗಬೇಡಿ ಒಂದು ವೇಳೆ ಹೋದರೂ ಮೂರು ಮೂರು ಸಲ ತಣ್ಣೀರಿನ ತೀರ್ಥ ತೊಗೋಬೇಡಿ ವಿಪ್ರೀತ ಶೀತ ಆಗುತ್ತೇಂತ ಹೇಳ್ದೆ. ಹೆಂಗಸರ ಮಾತು ನೀವೆಲ್ಲಿ ಕೇಳ್ತೀರಿ ಹೇಳಿ' ಅಂತ ಗುಡುಗುಡುಗಿತು. ನಾನಿನ್ನೂ ಸಮಾಜಾಯಿಸಿ ಹೇಳೋಣ ಅನ್ನುವಷ್ಟರಲ್ಲೇ, 'ಅಲ್ರೀ ಮಂಗಳಾರತಿ ತೊಗೋಬೇಕಾದ್ರೂ ದೂರನಿಂತೇ ತೊಗೊಳ್ಳಿ ದಕ್ಷಿಣೆ ಕಾಸು ಹಾಕಬೇಕಾದ್ರೂ ದೂರದಿಂದಲೇ ತಟ್ಟೆಗೆ ಹಾಕಿ ಇಲ್ಲ ಡೈರಕ್ಟಾಗಿ ಕಾಣಿಕೆ ಹುಂಡಿಗೇ ಹಾಕಿ ಹತ್ತಿರ ಹೋದರೆ ಉಷ್ಣ ಆಗುತ್ತೇಂತ ಹೇಳ್ದೆ. ನನ್ನ ಮಾತು ನೀವೆಲ್ಲಿ ಕೇಳ್ತೀರಿ ಹೇಳಿ. ಈ ಗಂಡಸರೇ ಹೀಗೆ ಸ್ವಂತ ಬುದ್ದೀಂತ ಇರೋದಿಲ್ಲ ಮನೆ ಹೆಂಗಸರು ಹೇಳಿದ್ರೆ ಕೇಳೋದಿಲ್ಲ, ನೋಡಿ ನಿಮಗೆ ಉಷ್ಣಕ್ಕೆ ಶೀತ ಆಗಿದೆ.....' ಅಂತ ಡಯಾಗ್ನೈಜ್ ಮಾಡಿ ಗೊಣಗಿಕೊಂಡೇ ಅಡಿಗೆ ಮನೆಗೆ ದಡ ದಡ ನಡೆದಳು. ಪಾತ್ರೆಗಳ ಶಬ್ದ ನಿರಂತರವಾಗಿ ನಡೀತಿತ್ತು.

ನಾನೇನು ಮಾಡ್ಲಿ ಹೇಳಿ? ನಾನು ಸ್ವಲ್ಪ ಸೂಕ್ಷ್ಮ ಅಂತ ಅವಳಿಗೂ ಗೊತ್ತು ರೀ. ಅಂದಹಾಗೆ ನನಗೆ ಥಟ್ ಅಂತ ಒಂದು ಐಡಿಯಾ ಬಂತು. ಇನ್ನು ಮೇಲೆ ದೇವಸ್ಥಾನಗಳಲ್ಲಿ ಕಾದಾರಿದ ನೀರಿನ ತೀರ್ಥ, ಕೂಲಾಗಿ ಎಲೆಕ್ಟ್ರಿಕಲ್ ಮಂಗಳಾರತಿ ಜಾರಿಗೆ ತಂದರೆ ಹೇಗೆ? ಅಂತ ಅನಿಸಿತು! ತಲೆಗಿಲೆ ಕೆಟ್ಟಿದೆ ಅಂತ ಯಾರಾದ್ರು ಅಂದುಕೊಂಡು ಬಿಟ್ಟಾರೆಂದು ಕುರ್ಚಿಯಿಂದ ಎದ್ದು ಮಂಚದ ಮೇಲೆ ಮೈ ಚೆಲ್ಲಿ ತಲೆ ನೇವರಿಸಿಕೊಳ್ಳುತ್ತಿದ್ದಂತೆ ನೆನಪುಗಳು ಹಿಂದಕ್ಕೆ ಓಡಿದವು. ಅಂಥ ನೆನಪುಗಳನ್ನು ನಿಮ್ಮ ಹತ್ರ ಹಂಚಿಕೊಳ್ಳೋಣ ಅಂತ ಅನ್ನಿಸಿದೇರೀ.

ಡೊನೇಷನ್ನು, ರಿಜರ್ವೇಷನ್ನು ಇಲ್ಲದ ಕಾಲದಲ್ಲಿ ನಾನು ಶಾಲೆಗೆ ಸೇರುವ ಸಂದರ್ಭ. ಅಪ್ಪನ ಜೊತೆ ಹೋಗಿದ್ದೆ. 'ನೋಡಿ ಮೇಡಂ ನಂಗೆ ಒಬ್ಬನೇ ಒಬ್ಬ ಮಗ. ತುಂಬಾ ಮುದ್ದಾಗಿ ಸಾಕಿದ್ದೀವಿ. ಸ್ವಲ್ಪ ಸೂಕ್ಷ್ಮ. ದಯವಿಟ್ಟು ಇವನನ್ನ ಹೊಡ್ದುಬಡ್ದು ಪಾಠ ಮಾಡಬೇಡಿ. ಕಣ್ಣು ಕೆಂಪಗೆ ಮಾಡಿಕೊಳ್ಳದೆ ದೊಡ್ಡದಾಗಿ ಅರಳಿಸದೆ ಮೃದುವಾಗಿ ಹೇಳಿದರೆ ಸಾಕು. ತಿಳಿದುಕೊಂಡು ಬಿಡುತ್ತಾನೆ ನಮ್ಮ ಹುಡುಗ ಜಾಣ ಆದರೂ ತುಂಬಾ ಸೂಕ್ಷ್ಮ' - ಅಂತ ಹೇಳಿ ಅಪ್ಪ ಮೇಡಂಗೆ ಹಸ್ತಲಾಘನ ಮಾಡ್ತಿದ್ದು ನಾನು ಗಮನಿಸುತ್ತಿದುದು ಅವರಿಬ್ಬರಿಗೂ ಗೊತ್ತಾಗಲೇ ಇಲ್ಲ. ಆ ಮೇಡಮ್ಮು ಹಾಗೇ ಅಪ್ಪನ ಕೈ ಕುಲುಕಿದ್ದೂ ಕುಲುಕಿದ್ದೇ. ನಂಗೆ ನೋಡಿ

ನೋಡಿ ಸಾಕಾಗಿಹೋಯ್ತು. 'ಅಪ್ಪ' ಅಂತ ಎಡಗೈ ಕಿರುಬೆರಳು ತೋರಿಸಿದೆ. ಅಪ್ಪಂಗೆ ನನ್ನ ಸೂಕ್ಷ್ಮ ಅರಿವಾಯಿತು. ಅವಸವಸರವಾಗಿ ಕೈಹಿಡಿದುಕೊಂಡು ಹೊರನಡೆದರು.

ಈ ಜ್ವರ ಗಿರ ಬಂದಾಗ ಡಾಕ್ಟರ್ ಹತ್ತಿರ ಹೋದರೆ ಸಾಕು. 'ನೋಡಿ ಮಳೆ ಸೀಜನ್ ಶುರುವಾಗಿದೆ. ನೀವು ತುಂಬಾ ಸೂಕ್ಷ್ಮ ಹೊರಗಡೆ ಛಳಿ ಗಾಳೀಲಿ ಹೋಗಿ ತಿರುಗಾಡಿ ತುಂಬಾ ಎಕ್ಸ್‌ಪೋಸ್ ಆಗಬೇಡಿ. ಒಂದು ವೇಳೆ ಹೋಗಲೇ ಬೇಕಾದರೆ ಮಫ್ಲರು, ಸ್ವೆಟರ್ ಹಾಕ್ಕೊಂಡು, ಛತ್ರಿ ಹಿಡ್ಕೊಂಡು, ಕಾಲ್ಗೀಲ – ಶೂ ಹಾಕ್ಕೊಂಡು ಹೋಗಿ' – ಅಂತ ಹೇಳಿ ಮಾತ್ರೆ ನುಂಗೋದು ಕಷ್ಟ ಆಗಬಹುದು ಅಂತ ಡೈರಕ್ಟಾಗಿ ನೀರಿನ ಇಂಜೆಕ್ಷನ್ ಕೊಟ್ಟು ಕಳಿಸ್ತಿದ್ರು.

ಅಂದಹಾಗೆ ನಾನು ಮನೆಯಿಂದ ಹೊರಗೆ ಹೋಗಬೇಕಾದ್ರೆ ಮೊದಲಿನಿಂದಲೂ ಶಕುನ ನೋಡಿಕೊಂಡು ಹೋಗುವ ಅಭ್ಯಾಸ ಕಣ್ರೀ. ನೀವು ನಂಬಿಕೆ ಅನ್ನಿ ಅಥವಾ ಮೂಢನಂಬಿಕೆ ಅನ್ನಿ ನನಗೆ ಬೇಕಾಗಿಲ್ಲ, ತಲೆ ಮೇಲೆ ನೀರಿನ ಬಿಂದಿಗೆ ಹಿಡುಕೊಂಡು ಎದುರಿಗೆ ವಯ್ಯಾರವಾಗಿ ಬೆಡಗಿ ಬಂದರೆ ಓಕೆ. ಬೆಕ್ಕು ಗಿಕ್ಕು ಬಂತೋ ಮನೆಯೊಳಕ್ಕೆ ಬಂದು ಕೈಕಾಲು ಮುಖ ತೊಳೆದುಕೊಂಡು ಸ್ವಲ್ಪ ಹೊತ್ತು ಕೂತು ದೇವರ ಸ್ಮರಣೆ ಮಾಡಿ ಹೊರಡೋನು. ಏಕಂದ್ರೆ ನಾನು ಇಂಥ ವಿಚಾರದಲ್ಲೆಲ್ಲಾ ಸ್ವಲ್ಪ ಸೂಕ್ಷ್ಮ ಅಂತ ಆಗಲೇ ಹೇಳಿದಿನಲ್ಲ.

ಮದುವೆ ಪ್ರಸ್ತಾಪ ಮನೇಲಿ, ಯಾರದ್ದೋ ಅಂದ್ರ ನಂದೇರೀ, ಸರಿ ಹುಡಿಗೀನ ನೋಡೋದಕ್ಕೆ ಹೋದ್ವಿ. ಮಾಮೂಲಿನ ಸಂಪ್ರದಾಯದಂತೆ ಉಪ್ಪಿಲ್ಲದ ಉಪ್ಪಿಟ್ಟು, ಗೋಡಂಬಿ ಕಾಣದ ಕೇಸರಿಬಾತ್ ತಿಂದಾದ ಮೇಲೆ ಹುಡುಗಿ ನಾಚಿ ಬಾಗಿಲ ಹತ್ತಿರ ನೆಲ ಕೆರೀತಾ ನಿಲ್ಲಬಹದು ಅಂತಾ ಲೆಕ್ಕ ಹಾಕಿದ್ದೆ. ನನ್ನ ನಿರೀಕ್ಷೆ ಸುಳ್ಳಾಯಿತು. ನೇರವಾಗಿ ಬಂದವಳೆ ನಾನು ನಿಮ್ಮ ಹತ್ತಿರ ಸ್ವಲ್ಪ ಮಾತಾಡಬೇಕೂಂತ ಹಿತ್ತಲಿಗೆ ಕರೆದುಕೊಂಡು ಹೋಗಿ 'ನೀವು ತುಂಬಾ ಸೂಕ್ಷ್ಮವಂತೆ. ವರದಕ್ಷಿಣೆ ವರೋಪಚಾರ ಬೇಡ ಅಂದ್ರಂತೆ, ಛತ್ರಗಿತ್ರ ಬೇಡ ಹುಡುಗಿ ಕೊರಳಿಗೆ ಅರಶಿನದ ಕೊನೆ ತರ್ತೀನಿ. ಅಕ್ಷತೆ ಹಾಕಿ ದೇವಸ್ಥಾನದಲ್ಲಿ ತುಂಬಾ ಸಿಂಪಲ್ಲಾಗಿ ಮದುವೆ ಮಾಡಿಕೊಟ್ರೆ ಸಾಕು ಅಂದ್ರಂತೆ. ಈಗಿನ ಕಾಲದಲ್ಲಿ ಹೆಣ್ಣು ಹೆತ್ತೋರ ಸಂಕಟ ಏನೂಂತ ಇಷ್ಟು ಸೂಕ್ಷ್ಮವಾಗಿ ಅರ್ಥಮಾಡಿಕೊಂಡವರ ಕೈಹಿಡೀತಿದೀನಲ್ಲ ಅನ್ನೋ ಹೆಮ್ಮೆ ನನಗಾಗಿದೆ. ನಿಮಗೆ ತುಂಬಾ ಥ್ಯಾಂಕ್ಸ್' ಅಂದ್ಬಿಟ್ಲು. ಸೂಕ್ಷ್ಮವಾಗಿ ಕರಗಿ ನೀರಾಗಿ ಹೋದೆ.

ಈ ಸೂಕ್ಷ್ಮದ ಬಗ್ಗೆ ಯೋಚನೆ ಮಾಡುವಾಗ ನನ್ನ ಗೆಳೆಯ ಅಬ್ದುಲ್ ರೆಹಮಾನ್ ಪಾಷ ಬರೆದ ರಾಜಕುಮಾರಿ ಕಥೆಯೊಂದು ನೆನಪಾಯಿತು. ಬಹಳ ಹಿಂದೆ ಸುಮಾರು 14–15 ವರ್ಷದ ರಾಜಕುಮಾರಿಯೊಬ್ಬಳು ಅರಮನೇಲಿದ್ದಳಂತೆ. ಅರಮನೆಯಲಲ್ದೆ ಸೆರಮನೇಲಿ ಇರ್ತಾಳಾಂತ ನೀವು ಕೇಳಬಹುದು. ಹೌದು ಅವಳಿಗೆ ಅರಮನೇನೆ ಸೆರೆಮನೆ ಆಗಿತ್ತು. ತಿಂಡಿ ಇಲ್ಲ ತೀರ್ಥವಿಲ್ಲ ಊಟವಿಲ್ಲ ನಿದ್ರೆ ಇಲ್ಲ ಅಳುವಿಲ್ಲ ನಗುವಿಲ್ಲ. ರೂಪ ಸ್ವಭಾವ ಬೊಂಬೆ ರೀತಿ, ಅವಳನ್ನ ನಗಿಸಿದವರಿಗೆ ಅರ್ಧ ರಾಜ್ಯ ಅಂತ ರಾಜ ಡಂಗೂರ ಸಾರಿಸಿದ. ಮಂತ್ರವಾದಿಗಳು ಬಂದರು, ಮನಃಶಾಸ್ತ್ರದವರು ಬಂದ್ರು ಊಹುಂ ನಗಲಿಲ್ಲ, ನಕಲೀ ಶ್ಯಾಮರು ಚೇಷ್ಟೇ ಮಾಡಿದರೂ ರಾಜಕುಮಾರಿ ನಗಲಿಲ್ಲ, ರಾಜ ರಾಣಿ ಕೊರಗಿದರು.

ಅಷ್ಟರಲ್ಲಿ ರಾಜಕುಮಾರಿ ವಯಸ್ಸಿನ ಮೂರು ಹುಡುಗರು ಕದ್ದು ಅರಮನೆ ಪ್ರವೇಶಿಸಿ ಅವಳನ್ನು ರಮ್ಯ ಪ್ರಕೃತಿಯ ಒಡಲಿಗೆ ಕರೆತಂದರು. ಏನಾಶ್ಚರ್ಯ ಅಂತೀರಿ. ಪಂಜರದಿಂದ ತಪ್ಪಿಸಿಕೊಂಡು ಬಂದು ಹಾರಾಡುವ ಹಕ್ಕಿಯಂತೆ ಮನದುಂಬಿ ನಗಲಾರಂಭಿಸಿದಳು. ಸ್ವೇಚ್ಛೆಯಾಗಿ ಕುಣಿದು ಕುಪ್ಪಳಿಸಿದಳು. ರಾಜನಿಗೂ ಖುಷಿಯಾಗಿ ಅರ್ಧರಾಜ್ಯ ಆ ಮಕ್ಕಳಿಗೆ ನೀಡಿದ. ಸ್ವೇಚ್ಛೆಯಾಗಿ ಹಾರಾಡಬೇಕೆಂಬ ಮಕ್ಕಳ ಸೂಕ್ಷ್ಮ ಮನಸ್ಸನ್ನು ಯಾವ ತಂದೆ ತಾಯಿ ಅರ್ಥ ಮಾಡಿಕೊಂಡಿರ್ತಾರೆ ಹೇಳ್ರೀ? ಪರೋಕ್ಷವಾಗಿ ಪ್ರಜಾಪ್ರಭುತ್ವದ ಸೊಗಡನ್ನು ಸೂಕ್ಷ್ಮವಾಗಿ ನವುರಾಗಿ ಬಿಂಬಿಸಲಾದ ಕಥೆ ಅದು.

ನೋಡಿ ಸ್ವಾಮಿ ಬದುಕಿನಲ್ಲಿ ಎಷ್ಟೋ ಸೂಕ್ಷ್ಮಗಳು ನಮಗೆ ಅರ್ಥವಾಗೋದೇ ಇಲ್ಲ. ಅರ್ಥಮಾಡಿಕೊಳ್ಳುವ ಪ್ರಯತ್ನವನ್ನು ನಾವು ಮಾಡೋದಿಲ್ಲ. ಅದು ಗಂಡ ಹೆಂಡತಿ ನಡುವೆ ಇರಬಹುದು. ಹೆತ್ತವರ ಮತ್ತು ಮಕ್ಕಳ ನಡುವೆ ಇರಬಹುದು, ಗುರುಶಿಷ್ಯರ ನಡುವೆ ಇರಬಹುದು ಅಥವಾ ಪ್ರೇಮಿಗಳ ನಡುವೆ ಇರಬಹುದು, ಮತ್ತೊಬ್ಬರ ಸೂಕ್ಷ್ಮಗಳನ್ನು ಅರ್ಥ ಮಾಡಿಕೊಳ್ಳದಿರುವುದರಿಂದಲೇ ಈ ಜಗತ್ತು ಅನರ್ಥದೆಡೆಗೆ ಸಾಗಿದೆ ಅಂತ ನನ್ನ ಭಾವನೆ. ನಿಘಂಟುವಿನ ಅರ್ಥವ್ಯಾಪ್ತಿಯಲ್ಲಿ ಹಿಡಿದಿಡುವಷ್ಟು ಸೂಕ್ಷ್ಮಪದ ಇದಲ್ಲ ಅಂತಾ ನಿಮಗೂ ಗೊತ್ತು, ನಗಬೇಡಿಯಪ್ಪ ತುಂಬಾ ನೋವಾಗುತ್ತೆ. ಏಕೆಂದರೆ ನಿಮಗೇ ಗೊತ್ತಲ್ಲ ನಾನು ಸ್ವಲ್ಪ ಸೂಕ್ಷ್ಮ ಅಂತ.

✻





ಫೋಟೊ ಪ್ರಹಸನ

# ಕೂಸಿನ ಕೈಯಾಗ ಕಾಂಚಾಣ...

**- ಪ್ರಶಾಂತ ಆಡೂರ**

**ಮೊ**ನ್ನೆ ನಮ್ಮ ಅಂಗಡಿ ಪ್ರಭ್ಯಾನ ಎರಡನೇ ಮಗಳನ ನೋಡಲಿಕ್ಕೆ ಹೋಗಿದ್ದೆ, ಪಾಪ ಒಂದನೇದು ಮಗಳ ಇತ್ತ. ಎರಡನೇದ ಬ್ಯಾಡ ಅಂತ ಅವನ ಹೆಂಡತಿ ಎಷ್ಟ ಬಡ್ಕೊಂಡರು ಈ ಮಗಾ ಏ ಒಂದ ಗಂಡ ಆಗಬೇಕ, ನಾಳೆ ಕಿರಾಣಿ ಅಂಗಡ್ಯಾಗ ಕೂಡೋರ ಯಾರು? ಅಂತ ಗಂಟ ಬಿದ್ದ ಎರಡನೇದ ಹಡದಿದ್ದಾ. ಪಾಪ ಗಂಡ ಆಗಲಿ ಅಂತ ಬಡಬಡಸಿದರ ಎರಡನೇದು ಹೆಣ್ಣ ಆಗಿತ್ತ.

ನಾ ಒಂದ ಸರತೆ ಹೋಗಿ ಅವನ್ನ ಮಾತಾಡಿಸಿದಂಗೂ ಆತ ಹಂಗ ಮಗಳನ ನೋಡಿದರಾತು ಅಂತ ಹೆಂಡತಿನ್ನ ಕರಕೊಂಡ ಹೋಗಿದ್ದೆ. ನಾವು ಕೂಸಿನ್ನ ನೋಡಿ ಬರಬೇಕಾರ ನನ್ನ ಹೆಂಡತಿ ನನ್ನ ಕಿವ್ಯಾಗ ರ್‍ರಿ, ಒಂದ ಇಪ್ಪತ್ತ ರೂಪಾಯಿ ಕೊಡ್ರಿ ಕೂಸಿನ ಕೈಯಾಗ ಕೊಡಲಿಕ್ಕೆ ಅಂದ್ಲು.

ನನ್ನ ಕಿಸೆದಾಗ ಇಪ್ಪತ್ತರ ನೋಟ ಇರಲಿಲ್ಲಾ, ನಾ ಅದಕ್ಕ ಮುಂದಿನ ಸಲಾ ಬಂದಾಗ ಕೊಡೋಣ ತೊಗೊ ಈಗ ನನ್ನ ಕಡೆ ಚೇಂಜ್ ಇಲ್ಲಾ ಅಂದೆ. ಅದಕ್ಕ ನನ್ನ ಹೆಂಡತಿ ಗಂಟ ಮಾರಿ ಮಾಡಿ ಭಾಳ ಶಾಣ್ಯಾರ ಇದ್ದೀರಿ ತೊಗೊರಿ, ಐವತ್ತರದ ಕೊಡ್ರಿ. ಕೂಸಿನ ನೋಡಲಿಕ್ಕೆ ಬರಬೇಕಾರ ಹತ್ತರದ ಇಪ್ಪತ್ತರದ ತೊಗೊಂಡ ಬರಬೇಕ ಅಂತ ತಿಳಿಯಂಗಿಲ್ಲಾ ಅಂತ ನಂಗ ಬೈದ ಐವತ್ತರ ನೋಟ ಕಸಗೊಂಡ ಆ ಕೂಸಿನ ಕೈಯಾಗ ಕೊಟ್ಟಳು.

ಆ ಕೂಸು ನನ್ನ ಹೆಂಡತಿ ಮಾರಿ ಒಂದ ಸರತೆ ನೋಡಿ ತನ್ನ ಮಾರಿ ಗಂಟ ಮಾಡ್ಕೊಂಡ ಅಕಿ ಕೊಟ್ಟಿದ್ದ ನೋಟ ಮುಟ್ಟಲೇ ಇಲ್ಲಾ, 'ಏ, ತೊಗೊ... ತೊಗೊ' ಅಂತ ನನ್ನ ಹೆಂಡ್ತಿ ಆ ಕೂಸಿನ ಕೈಯಾಗ ಜಬರದಸ್ತಿ ತುರುಕಿದರು ಅದೇನ ಮುಟ್ಟಲಿಲ್ಲಾ.

ಅಷ್ಟರಾಗ ಅವರವ್ವ 'ಏ ಈಗ್ಯಾಕ ಕೊಡ್ತೀರಿ, ನಾಳೆ ಹೆಸರ ಇಡಲಿಕ್ಕೆ ಬಂದಾಗ ಕೊಟ್ಟರಂತಿ ತೊಗೊರಿ' ಅಂದ್ಲು.

'ಏ, ಒಂದನೇ ಸರತೆ ಕೂಸಿನ ನೋಡಲಿಕ್ಕೆ ಬಂದೇವಿ, ಹಂಗ ಹೋಗಬಾರದು, ಅದು ಪದ್ಧತಿ ಅಲ್ಲಾ' ಅಂತ ಮತ್ತ ನನ್ನ ಹೆಂಡ್ತಿ ಆ ಹಳೆ ಐವತ್ತರ ನೋಟ ಕೂಸಿನ ಕೈಯಾಗ ತುರಕಲಿಕತ್ಲು, ಆ ಕೂಸ ಜುಪ್ ಅಂದರು ನೋಟ ಹಿಡಿಲಿಲ್ಲಾ. ಅಷ್ಟರಾಗ ನಮ್ಮ ಪ್ರಭ್ಯಾ 'ಲೇ... ದೋಸ್ತ ನನ್ನ ಮಗಳ ಐವತ್ತ, ಇಪ್ಪತ್ತರ ನೋಟ ಮುಟ್ಟೋಕಿ ಅಲ್ಲಾ, ಬೇಕಾರ ನೀ ನೂರರ ನೋಟ ಕೊಟ್ಟ ನೋಡ, ಅಕಿ ಬಿಟ್ಟರ ಕೇಳ' ಅಂದಾ.

ಅಂವಾ ಹೇಳಿದಂಗ ನಾ ಕಿಸೇದಾಗಿನ ನೂರರ ನೋಟ ತಗದ ಹಿಡಿಲ್ಯೋ ಬ್ಯಾಡೋ ಅಂತ ಹಂಗ ಕೂಸಿನ ಮುಂದ ಹಿಡಿಯೋದ ತಡಾ ಅದ ನೋಟ ಜಕ್ಕೊಂಡ ಬಿಡ್ತು. ಹೇಳಿ ಕೇಳಿ ಕಿರಾಣಿಯವನ ಮಗಳ, ನೂರರ ನೋಟ ಏಕ್‌ದಮ್ ಗೊತ್ತ ಹಿಡಿತ.

'ಏ, ಮಗಳಿಗೆ ಸಹಿತ ಭಾರಿ ಟ್ರೇನಿಂಗ ಮಾಡಿ ಬಿಡ ಮಗನ' ಅಂತ ನಾ ಅಂದರ ಅಂವಾ 'ಲೇ, ನನ್ನ ಮಗಳ ನೂರರದ, ಐದನೂರರದ, ಸಾವಿರದ್ದ ಇಷ್ಟ ತೊಗೊತಾಳ, ಆಕಿ ಅಳಬೇಕಾರ ಸಾವಿರರ ನೋಟ ಕೊಟ್ಟರ ಗಪ್ಪ ಆಗಿ ಬಿಡ್ತಾಳ' ಅಂತ ಹೇಳಿದಾ.

ಅಲ್ಲಾ, ಆ ಸಣ್ಣ ಕೂಸಿಗೆ ಕರೆನ್ಸಿ ವ್ಯಾಲ್ಯೂ ಹೆಂಗ ತಿಳಿತದ ಅಂತೇನಿ.

ಆದರೂ ಈಗಿನ ಮಕ್ಕಳ ಭಾಳ ಜಾಬಾದ ಆಗ್ಯಾವ ಬಿಡ್ರಿ, ನಾವು ಸಣ್ಣೊರಿದ್ದಾಗ ಚಿಲ್ಲರಾಕ್ಕ ಅಣ್ಣಾ-ತಮ್ಮಾ , ಅಕ್ಕ-ತಂಗಿ ಹೊಡದಾಡಿ ಸಾಯಿತಿದ್ವಿ, ಈಗೀನ ಹುಡಗರ ಹತ್ತ ರೂಪಾಯಿ ಕೊಟ್ಟರ ಏನ ಬರತದ ಹತ್ತ ರೂಪಾಯಿಕ್ಕ? ಅಂತ ನಮ್ಮ ಮಾರಿ ಮ್ಯಾಲೆ ಒಗದ ಹೋಗ್ತಾವ. ಕಾಲ ಬದಲಾದಂಗ ಕರೆನ್ಸಿ ವ್ಯಾಲೂನೂ ಬದಲಾಗಲಿಕತ್ತದ ಅಂತ ಅನ್ಕೊಂಡ ನೂರರ ನೋಟ ಪ್ರಭ್ಯಾನ ಮಗಳಿಗೆ ಕೊಟ್ಟ ಸಾಕ ಇನ್ನ ಮತ್ತ ಗಂಡ ಆಗಲಿ ಅಂತ ಮತ್ತೊಂದ ಹಡದ ಗಿಡದಿ ಅಂತ ಅವಂಗ ಬುದ್ಧಿ ಹೇಳಿ ಬಂದ್ವಿ.

ಅವರ ಮನಿ ಇಂದ ವಾಪಸ ಬರಬೇಕಾರ ನನ್ನ ಹೆಂಡತಿ ಏನ ಅಂದ್ಲ ಹೇಳ್ರಿ? ಅಲ್ಲರಿ ಆ ಕೂಸಿನ ಕೈಯಾಗ ಐವತ್ತರ ಬದ್ಲಿ ನೂರರದ ಕೊಟ್ಟರಿ... ಅವರಪ್ಪನ ಕಡೆ ಐವತ್ತು ರೂಪಾಯಿ ವಾಪಸ ಇಸ್ಗೊಂಡ ಬರಬೇಕಿಲ್ಲ ಅಂತ ಅಂದ್ಲು.

ಏನ್ಮಾಡ್ತೀರಿ?

*

---

## ಮುಂಜಾಗ್ರತೆ

ಸೋಮು ಅರ್ಜೆಂಟಾಗಿ ಆಫೀಸಿಗೆ ಹೊರಟಿದ್ದಾಗ ಎದುರಿಗೆ ಅಡ್ಡ ಬಂದ ತಿಕ್ಕಲು ಶ್ಯಾಮ ಸರ್ ನನ್ನ ಮಗೂಗೆ ಅರ್ಜೆಂಟಾಗಿ ಒಂದು ಹೆಸರನ್ನು ಸಜೆಸ್ಟ್ ಮಾಡಿ ಸರ್ ಅಂದ. ಮಗು ಗಂಡೋ ಹೆಣ್ಣೋ ಅಂತ ಕೇಳಿದರೆ ಸರ್ ನನಗಿನ್ನೂ ಮಗುವಾಗಿಲ್ಲ ಅಂದ. ನಿನ್ನ ಹೆಂಡ್ತಿ ಬಸಿರಿನಾ ಅಂತ ಕೇಳಿದರೆ ಅಯ್ಯೋ ನನಗಿನ್ನೂ ಮದುವೆನೇ ಆಗಿಲ್ಲ ಅಂದ. ಮತ್ತೆ ಮಗು ಹೆಸರು ಈಗ್ಯಾಕಯ್ಯ ಅಂತ ಕೇಳಿದರೆ ಸರ್. 21ನೇ ಶತಮಾನ ಎಲ್ಲದಕ್ಕೂ ಸ್ವಲ್ಪ ಅಡ್ವಾನ್ಸ್ ಆಗಿದ್ದರೆ ಕ್ಷೇಮ ಅಲ್ವಾ ಅಂದ.